# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 12 |
| 2. | ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | 07/12/2020 |
| 4. | ಉತ್ತರಿಸುವವರು | ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು |

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr>
<td>ಅ)</td>
<td>ಹಾಸನ ಜಿಲ್ಲೆಯಲ್ಲಿರುವ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು; ಯಾವ ಯಾವ ಉದ್ಯಮಗಳಲ್ಲಿ ಎಷ್ಟು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ; (ವಿವರ ನೀಡುವುದು) ರಾಜ್ಯದ ಯಾವ ಯಾವ ನಗರಗಳಲ್ಲಿ ಇ.ಎಸ್.ಐ ಆಸ್ಪತ್ರೆಗಳಿವೆ; (ವಿವರ ನೀಡುವುದು)</td>
<td>ಹಾಸನ ಜಿಲ್ಲೆಯಲ್ಲಿ ವಿವಿಧ ಹುದ್ದೆಗಳಲ್ಲಿ ಒಟ್ಟು 36,197 ಸಂಘಟಿತ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ ಸಂ.</th><th>ಉದ್ದಿಮೆಗಳ ವಿವರ</th><th>ಕಾರ್ಮಿಕರ ಸಂಖ್ಯೆ</th></tr>
<tr><td>1</td><td>ಗಾರ್ಮೆಂಟ್ಸ್</td><td>10,363</td></tr>
<tr><td>2</td><td>ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ</td><td>4,442</td></tr>
<tr><td>3</td><td>ಸಾರ್ವಜನಿಕ ಮೋಟಾರು ಸಾರಿಗೆ</td><td>2,628</td></tr>
<tr><td>4</td><td>ವಿದ್ಯುತ್ ಉತ್ಪಾದನೆ ಮತ್ತು ವಿತರಣೆ</td><td>1,789</td></tr>
<tr><td>5</td><td>ಪ್ಲಾಂಟೇಷನ್</td><td>3,722</td></tr>
<tr><td>6</td><td>ಇತರೆ ಕಾರ್ಖಾನೆಗಳು</td><td>13,253</td></tr>
<tr><td colspan="2">ಒಟ್ಟು</td><td>36,197</td></tr>
</table>
ಹಾಸನ ಜಿಲ್ಲೆಯಲ್ಲಿ ವಿವಿಧ ಹುದ್ದೆಗಳಲ್ಲಿ ಒಟ್ಟು 1,00,968 ಅಸಂಘಟಿತ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ ಸಂ.</th><th>ಉದ್ದಿಮೆಗಳ ವಿವರ</th><th>ಕಾರ್ಮಿಕರ ಸಂಖ್ಯೆ</th></tr>
<tr><td>1</td><td>ಇತರೆ ಸಂಸ್ಥೆಗಳು</td><td>15,300</td></tr>
<tr><td>2</td><td>ಕಟ್ಟಡ ನಿರ್ಮಾಣ</td><td>48,065</td></tr>
<tr><td>3</td><td>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ಸ್ಮಾರ್ಟ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿದ ಹಮಾಲರು ಗೃಹ ಕಾರ್ಮಿಕರು, ಚಿಂದಿ ಆಯುವವರು, ಟೈಲರ್‌ಗಳು, ಮೆಕಾನಿಕ್ಸ್,ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು,ಹಾಗೂ ಬಟ್ಟಿ ಕಾರ್ಮಿಕರು</td><td>3,702</td></tr>
<tr><td>4</td><td>ಖಾಸಗಿ ವಾಣಿಜ್ಯ ವಾಹನ ಚಾಲಕರು</td><td>33,901</td></tr>
<tr><td></td><td>ಒಟ್ಟು</td><td>1,00,968</td></tr>
</table>
ಕಾರ್ಮಿಕ ಇಲಾಖೆಯಲ್ಲಿ 07 ಕಾರಾವಿ ಆಸ್ಪತ್ರೆ ಮತ್ತು 02 ರೋಗ ಪತ್ತೆ ಹಚ್ಚುವ ಕೇಂದ್ರ ಹಾಗೂ 113 ಕಾರಾವಿ ಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿವೆ. ವಿವರವುಳ್ಳ ಪಟ್ಟಿಯನ್ನು ಲಗತ್ತಿಸಿದೆ. <u>ಅನುಬಂಧ-1</u></td>
</tr>
</table>

| | | |
|---|---|---|
| ಆ) | ಸರ್ಕಾರವು ಕಾರ್ಮಿಕರಿಗೆ ನಿಗದಿಪಡಿಸಿರುವ ಮಾಸಿಕ ವೇತನ ಮತ್ತು ಇತರೆ ಭತ್ಯೆಗಳ ವಿವರ ನೀಡುವುದು; ಕೆಲಸ ನಿರ್ವಹಿಸುವ ಜಾಗದಲ್ಲಿ ಕಾರ್ಮಿಕರಿಗೆ ಅಪಘಾತವಾಗಿ ಅಂಗವಿಕಲತೆ ಅಥವಾ ಇತರೆ ತೊಂದರೆಗಳು ಉಂಟಾದಲ್ಲಿ ಅಂತಹ ಕಾರ್ಮಿಕರಿಗೆ ಸರ್ಕಾರ ಮತ್ತು ಉದ್ಯೋಗದಾತರು ನೀಡುವ ಪರಿಹಾರಗಳೇನು; (ವಿವರ ನೀಡುವುದು) | ಸರ್ಕಾರವು ಒಟ್ಟು 82 ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ದರಗಳನ್ನು ನಿಗದಿಪಡಿಸಿ ಕಾಲ-ಕಾಲಕ್ಕೆ ನಿಯಮಾನುಸಾರ ಪರಿಷ್ಕರಿಸುತ್ತದೆ. ಸದರಿ ಅನುಸೂಚಿತ ಉದ್ದಿಮೆಗಳು ಅಸಂಘಟಿತ ಕಾರ್ಮಿಕರನ್ನೂ ಒಳಗೊಂಡಿರುತ್ತವೆ. 2020-21 ನೇ ಸಾಲಿಗೆ 82 ಅನುಸೂಚಿತ ಉದ್ದಿಮೆಗಳಿಗೆ ಅನ್ವಯವಾಗುವ ಕನಿಷ್ಠ ವೇತನ ದರಗಳ ಕನಿಷ್ಠ-ಗರಿಷ್ಠ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br>1. ಸಂಘಟಿತ ಕಾರ್ಮಿಕರು ಕೆಲಸದ ವೇಳೆಯಲ್ಲಿ ಅಪಘಾತವಾದಲ್ಲಿ ಕನಿಷ್ಠ ರೂ. 1,000/- ಗರಿಷ್ಠ ರೂ. 10,000/- ವರೆಗೆ ಧನ ಸಹಾಯ ಕರ್ನಾಟಕ ಕಲ್ಯಾಣ ಮಂಡಳಿಯಿಂದ ನೀಡಲಾಗುವುದು.<br>2. ಕಟ್ಟಡ ಕಾರ್ಮಿಕರು ಕೆಲಸದ ವೇಳೆಯಲ್ಲಿ ಅಪಘಾತವಾಗಿ ಶಾಶ್ವತ /ಭಾಗಶಃ ಅಂಗವಿಕಲತೆ ಹೊಂದಿದ್ದರೆ ದುರ್ಬಲತೆ ಪಿಂಚಣಿ: ಮಾಸಿಕ ರೂ.2,000/- ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ.2,00,000/- ದವರೆಗೆ ಅನುಗ್ರಹ ರಾಶಿ ಹಾಗೂ ಮರಣ ಹೊಂದಿದಲ್ಲಿ ರೂ.5,00,000/- ಅಪಘಾತ ಪರಿಹಾರವನ್ನು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೀಡಲಾಗುವುದು.<br>3. ಅಪಘಾತ ಪರಿಹಾರಕ್ಕೆ ಸಂಬಂಧಿಸಿದಂತೆ ಮಂಡಳಿಯು, ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಲಾಯಿಸಲು ಸಾರಿಗೆ ಇಲಾಖೆಯಿಂದ ಊರ್ಜಿತ ಚಾಲನ ಪರವಾನಗಿ ಹೊಂದಿರುವ ಚಾಲಕರಿಗೆ, ಯೋಜನೆಯಡಿ ನೋಂದಾಯಿತ ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ "ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ"ಯಡಿ ಅಪಘಾತ ಪರಿಹಾರ ಸೌಲಭ್ಯ ಒದಗಿಸುತ್ತಿದ್ದು, ಈ ಕೆಳಕಂಡಂತೆ ಅಪಘಾತ ಪರಿಹಾರವನ್ನು ನೀಡಲಾಗುತ್ತಿದೆ:-<br>➢ ಅಪಘಾತದಿಂದ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳು ಮರಣ ಹೊಂದಿದಲ್ಲಿ, ಅವರ ನಾಮನಿರ್ದೇಶಿತರಿಗೆ ರೂ.5 ಲಕ್ಷ ಪರಿಹಾರ.<br>➢ ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಾಗ, ಫಲಾನುಭವಿಗೆ ದುರ್ಬಲತೆಯ ಪ್ರಮಾಣಕ್ಕನುಗುಣವಾಗಿ ಗರಿಷ್ಠ ರೂ.2 ಲಕ್ಷದ ವರೆಗೆ ಪರಿಹಾರ.<br>➢ ಅಪಘಾತದಿಂದ ತಾತ್ಕಾಲಿಕ ದುರ್ಬಲತೆ ಹೊಂದಿದಾಗ-<br>❖ ಅಪಘಾತಕ್ಕೊಳಗಾಗಿ ಆಸ್ಪತ್ರೆಯಲ್ಲಿ 15 ದಿನಗಳಿಗಿಂತ ಕಡಿಮೆ ಅವಧಿಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ, ಗರಿಷ್ಠ ರೂ. 50,000/- ರವರೆಗೆ; ಅಥವಾ ನಿಖರ ಆಸ್ಪತ್ರೆ ವೆಚ್ಚ, ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಪಾವತಿಸಲಾಗುವುದು. |

| | | |
|---|---|---|
| | | ❖ 15 ದಿನಗಳಿಗಿಂತ ಹೆಚ್ಚು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಲ್ಲಿ, ಗರಿಷ್ಠ ರೂ. 1 ಲಕ್ಷದ ವರೆಗೆ ಅಥವಾ ನಿಜರ ಆಸ್ಪತ್ರೆ ವೆಚ್ಚ. ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಪಾವತಿಸಲಾಗುವುದು.<br><br>• ಶೈಕ್ಷಣಿಕ ಧನಸಹಾಯ:-<br>ಅಪಘಾತದಿಂದ ನಿಧನರಾದ ಹಾಗೂ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲಕರು ಯೋಜನೆಯಡಿ ನೋಂದಾಯಿತ ನಿರ್ವಾಹಕರು ಹಾಗೂ ಕ್ಲೀನರ್‌ಗಳ ಗರಿಷ್ಠ ಇಬ್ಬರು ಮಕ್ಕಳಿಗೆ 1 ರಿಂದ 12ನೇ ತರಗತಿಯವರೆಗೆ ವ್ಯಾಸಂಗಕ್ಕಾಗಿ ವಾರ್ಷಿಕ ತಲಾ ರೂ.10,000/-ಗಳ ಶೈಕ್ಷಣಿಕ ಧನ ಸಹಾಯ ನೀಡಲಾಗುತ್ತಿದೆ.<br><br>4. ಕಾರ್ಮಿಕರಿಗೆ ಅಪಘಾತವಾಗಿ ಅಂಗವಿಕಲತೆ ಅಥವಾ ಇತರೆ ತೊಂದರೆಗಳು ಉಂಟಾದಲ್ಲಿ ಉದ್ಯೋಗದಾತರು ನೌಕರರ ನಷ್ಟ ಪರಿಹಾರ ಕಾಯ್ದೆಯಲ್ಲಿ ಪರಿಹಾರ ಕೊಡಬೇಕಾಗುತ್ತದೆ. |
| ಇ) | ಸರ್ಕಾರವು ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಅನುಷ್ಠಾನಗೊಳಿಸಿರುವ ಯೋಜನೆಗಳು ಯಾವುವು; ಈ ಯೋಜನೆಗಳ ಮಾನದಂಡಗಳೇನು; ಈ ಯೋಜನೆಗಳಡಿ ಕಳೆದೆರಡು ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಪ್ರಯೋಜನ ಪಡೆದಿರುವ ಕಾರ್ಮಿಕರ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು) | ಸರ್ಕಾರವು ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಅನುಷ್ಠಾನಗೊಳಿಸಿರುವ ಯೋಜನೆಗಳ ವಿವರಗಳನ್ನು, ಮಾನದಂಡಗಳನ್ನು ಹಾಗೂ ಕಳೆದೆರಡು ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಪ್ರಯೋಜನ ಪಡೆದಿರುವ ಕಾರ್ಮಿಕರ ಸಂಖ್ಯೆಯನ್ನು ಈ ಕೆಳಕಂಡ ಅನುಬಂಧಗಳಲ್ಲಿ ಒದಗಿಸಿದೆ.<br>1. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಯೋಜನೆಗಳು ಅನುಬಂಧ -3<br>2. ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಯೋಜನೆಗಳು ಅನುಬಂಧ-4<br>3. ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಯೋಜನೆಗಳು ಅನುಬಂಧ-5. |

ಕಾಇ 395 ಎಲ್‌ಇಟಿ 2020

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಮತ್ತು ಸಕ್ಕರೆ ಸಚಿವರು

Scanned with CamScan

# ಕಾರ್ಮಿಕರರಾಜ್ಯವಿಮಾಯೋಜನೆವೈದ್ಯಕೀಯಸೇವೆಗಳಇಲಾಖೆ

## ಅನುಬಂಧ-1

| ಕ್ರಮಸಂಖ್ಯೆ | ಕಾ.ರಾ.ವಿಆಸ್ಪತ್ರೆಗಳು | ಸ್ಥಳ |
|---|---|---|
| 1 | ಕಾ.ರಾ.ವಿಆಸ್ಪತ್ರೆ | ಇಂದಿರಾನಗರ, ಬೆಂಗಳೂರು |
| 2 | ಕಾ.ರಾ.ವಿಆಸ್ಪತ್ರೆ | ಮಂಗಳೂರು |
| 3 | ಕಾ.ರಾ.ವಿಆಸ್ಪತ್ರೆ | ದಾವಣಗೆರೆ |
| 4 | ಕಾ.ರಾ.ವಿಆಸ್ಪತ್ರೆ | ಹುಬ್ಬಳ್ಳಿ |
| 5 | ಕಾ.ರಾ.ವಿಆಸ್ಪತ್ರೆ | ಬೆಳಗಾಂ |
| 6 | ಕಾ.ರಾ.ವಿಆಸ್ಪತ್ರೆ | ಮೈಸೂರು |
| 7 | ಕಾ.ರಾ.ವಿಆಸ್ಪತ್ರೆ | ದಾಂಡೇಲಿ |
| 8 | ರೋಗಪತ್ರೆಹಚ್ಚುವಕೇಂದ್ರ, ಬಸವನಗುಡಿ | ಬೆಂಗಳೂರು |
| 9 | ರೋಗಪತ್ರೆಹಚ್ಚುವಕೇಂದ್ರ, | ನಂಜನಗೂಡು |
| | **ಕಾ.ರಾ.ವಿಚಿಕಿತ್ಸಾಲಯಗಳು** | **ಬೆಂಗಳೂರುನಗರ** |
| 1 | ಕಾರಾವಿಚಿಕಿತ್ಸಾಲಯ | ಬನಶಂಕರಿ |
| 2 | ಕಾರಾವಿಚಿಕಿತ್ಸಾಲಯ | ಬಸವನಗುಡಿ |
| 3 | ಕಾರಾವಿಚಿಕಿತ್ಸಾಲಯ | ಬೊಮ್ಮನಹಳ್ಳಿ |
| 4 | ಕಾರಾವಿಚಿಕಿತ್ಸಾಲಯ | ಬಿನ್ನಿಪೇಟೆ |
| 5 | ಕಾರಾವಿಚಿಕಿತ್ಸಾಲಯ | ಬೊಮ್ಮಸಂದ್ರ |
| 6 | ಕಾರಾವಿಚಿಕಿತ್ಸಾಲಯ | ಕಾಟನ್‌ಪೇಟೆ |
| 7 | ಕಾರಾವಿಚಿಕಿತ್ಸಾಲಯ | ದಾಸರಹಳ್ಳಿ |
| 8 | ಕಾರಾವಿಚಿಕಿತ್ಸಾಲಯ | ದ್ಯಾವಸಂದ್ರ |
| 9 | ಕಾರಾವಿಚಿಕಿತ್ಸಾಲಯ | ಪ್ರೇಜರ್ ಟೌನ್ |
| 10 | ಕಾರಾವಿಚಿಕಿತ್ಸಾಲಯ | ಹನುಮಂತನಗರ |
| 11 | ಕಾರಾವಿಚಿಕಿತ್ಸಾಲಯ | ಜಯನಗರ |
| 12 | ಕಾರಾವಿಚಿಕಿತ್ಸಾಲಯ | ಜಾಲಹಳ್ಳಿ |
| 13 | ಕಾರಾವಿಚಿಕಿತ್ಸಾಲಯ | ಕೆ.ಆರ್.ಪುರಂ-1 |
| 14 | ಕಾರಾವಿಚಿಕಿತ್ಸಾಲಯ | ಕೆ.ಆರ್.ಪುರಂ-2 |
| 15 | ಕಾರಾವಿಚಿಕಿತ್ಸಾಲಯ | ಕೆಂಗೇರಿ |
| 16 | ಕಾರಾವಿಚಿಕಿತ್ಸಾಲಯ | ಕೋಣನಕುಂಟೆ |
| 17 | ಕಾರಾವಿಚಿಕಿತ್ಸಾಲಯ | ಮೈಸೂರುರಸ್ತೆ |
| 18 | ಕಾರಾವಿಚಿಕಿತ್ಸಾಲಯ | ಮಾಗಡಿರಸ್ತೆ |
| 19 | ಕಾರಾವಿಚಿಕಿತ್ಸಾಲಯ | ಮಾರತ್‌ಹಳ್ಳಿ |
| 20 | ಕಾರಾವಿಚಿಕಿತ್ಸಾಲಯ | ಮುನಿರೆಡ್ಡಿಪಾಳ್ಯ |
| 21 | ಕಾರಾವಿಚಿಕಿತ್ಸಾಲಯ | ಮಾರತ್‌ಹಳ್ಳಿ |
| 22 | ಕಾರಾವಿಚಿಕಿತ್ಸಾಲಯ | ಪೀಣ್ಯ |
| 23 | ಕಾರಾವಿಚಿಕಿತ್ಸಾಲಯ | ರಾಜಾಜಿನಗರ-1 |
| 24 | ಕಾರಾವಿಚಿಕಿತ್ಸಾಲಯ | ರಾಜಾಜಿನಗರ-2 |
| 25 | ಕಾರಾವಿಚಿಕಿತ್ಸಾಲಯ | ರಸಲ್ ಮಾರ್ಕೆಟ್-2 |

| | | |
|---|---|---|
| 26 | ಕಾರಾವಿಚಿಕಿತ್ಸಾಲಯ | ಶೇಷಾದ್ರಿಪುರಂ |
| 27 | ಕಾರಾವಿಚಿಕಿತ್ಸಾಲಯ | ಶ್ರೀರಾಮಪುರಂ |
| 28 | ಕಾರಾವಿಚಿಕಿತ್ಸಾಲಯ | ಸುಬ್ರಮಣ್ಯಪುರಂ |
| 29 | ಕಾರಾವಿಚಿಕಿತ್ಸಾಲಯ | ವಿಜಯನಗರ |
| 30 | ಕಾರಾವಿಚಿಕಿತ್ಸಾಲಯ | ವಿಶ್ವನೀಡಂ |
| 31 | ಕಾರಾವಿಚಿಕಿತ್ಸಾಲಯ | ವಿವೇಕನಗರ |
| 32 | ಕಾರಾವಿಚಿಕಿತ್ಸಾಲಯ | ವೈಟ್‌ಫೀಲ್ಡ್ |
| 33 | ಕಾರಾವಿಚಿಕಿತ್ಸಾಲಯ | ವಿಲ್ಸನ್‌ಗಾರ್ಡನ್ |
| 34 | ಕಾರಾವಿಚಿಕಿತ್ಸಾಲಯ | ಯಶವಂತಪುರ |
| 35 | ಕಾರಾವಿಚಿಕಿತ್ಸಾಲಯ | ಯಲಹಂಕ |
| 36 | ಕಾರಾವಿಚಿಕಿತ್ಸಾಲಯ | ಹಲಸೂರು |
| 37 | ಕಾರಾವಿಚಿಕಿತ್ಸಾಲಯ | ಲಗ್ಗೆರೆ |
| 38 | ಕಾರಾವಿಚಿಕಿತ್ಸಾಲಯ | ಅತ್ತಿಬೆಲೆ |
| 39 | ಕಾರಾವಿಚಿಕಿತ್ಸಾಲಯ | ಸಿಂಗಸಂದ್ರ |
| 40 | ಕಾರಾವಿಚಿಕಿತ್ಸಾಲಯ | ಜಿಗಣಿ |
| **ಬೆಂಗಳೂರುಗ್ರಾಮಾಂತರ** | | |
| 41 | ಕಾರಾವಿಚಿಕಿತ್ಸಾಲಯ | ಚನ್ನಪಟ್ಟಣ |
| 42 | ಕಾರಾವಿಚಿಕಿತ್ಸಾಲಯ | ದೊಡ್ಡಬಳ್ಳಾಪುರ |
| 43 | ಕಾರಾವಿಚಿಕಿತ್ಸಾಲಯ | ಹೊಸಕೋಟೆ |
| 44 | ಕಾರಾವಿಚಿಕಿತ್ಸಾಲಯ | ಗೊಟ್ಟಿಗೆರೆ |
| 45 | ಕಾರಾವಿಚಿಕಿತ್ಸಾಲಯ | ನೆಲಮಂಗಲ |
| 46 | ಕಾರಾವಿಚಿಕಿತ್ಸಾಲಯ | ದೇವನಹಳ್ಳಿ |
| **ಚಿತ್ರದುರ್ಗಜಿಲ್ಲೆ** | | |
| 47 | ಕಾರಾವಿಚಿಕಿತ್ಸಾಲಯ | ಚಿತ್ರದುರ್ಗ |
| **ದಾವಣಗೆರೆಜಿಲ್ಲೆ** | | |
| 48 | ಕಾರಾವಿಚಿಕಿತ್ಸಾಲಯ | ಸಿಟಿದಾವಣಗೆರೆ |
| 49 | ಕಾರಾವಿಚಿಕಿತ್ಸಾಲಯ | ಹರಿಹರ |
| 50 | ಕಾರಾವಿಚಿಕಿತ್ಸಾಲಯ | ಕೆ.ಬಿ. ಬಡಾವಣೆ |
| **ಕೋಲಾರಜಿಲ್ಲೆ** | | |
| 51 | ಕಾರಾವಿಚಿಕಿತ್ಸಾಲಯ | ರಾಜರ್ಟಸನ್ಪೇಟೆ |
| 52 | ಕಾರಾವಿಚಿಕಿತ್ಸಾಲಯ | ಮಾಲೂರು |
| **ಶಿವಮೊಗ್ಗಜಿಲ್ಲೆ** | | |
| 53 | ಕಾರಾವಿಚಿಕಿತ್ಸಾಲಯ | ಭದ್ರಾವತಿ |
| 54 | ಕಾರಾವಿಚಿಕಿತ್ಸಾಲಯ | ಎಂ.ಬಿ.ಎಂ. ಭದ್ರಾವತಿ |
| 55 | ಕಾರಾವಿಚಿಕಿತ್ಸಾಲಯ | ಶಿವಮೊಗ್ಗ |
| 56 | ಕಾರಾವಿಚಿಕಿತ್ಸಾಲಯ | ಸಾಗರರಸ್ತೆ, |
| 57 | ಕಾರಾವಿಚಿಕಿತ್ಸಾಲಯ | ಎನ್.ಟಿ. ರಸ್ತೆ |
| **ತುಮಕೂರುಜಿಲ್ಲೆ** | | |
| 58 | ಕಾರಾವಿಚಿಕಿತ್ಸಾಲಯ | ತುಮಕೂರು |

| | | |
|---|---|---|
| 59 | ಕಾರಾವಿಚಿಕಿತ್ಸಾಲಯ | ಕುಣಿಗಲ್ |
| 60 | ಕಾರಾವಿಚಿಕಿತ್ಸಾಲಯ | ತಿಪಟೂರು |
| **ರಾಮನಗರಜಿಲ್ಲೆ** | | |
| 61 | ಕಾರಾವಿಚಿಕಿತ್ಸಾಲಯ | ರಾಮನಗರ |
| 62 | ಕಾರಾವಿಚಿಕಿತ್ಸಾಲಯ | ಬಿಡದಿ |
| **ದಕ್ಷಿಣಕನ್ನಡಜಿಲ್ಲೆ** | | |
| 63 | ಕಾರಾವಿಚಿಕಿತ್ಸಾಲಯ | ಕರಂಗಲ್‌ಪಾಡಿ |
| 64 | ಕಾರಾವಿಚಿಕಿತ್ಸಾಲಯ | ಕುಲಶೇಖರ |
| 65 | ಕಾರಾವಿಚಿಕಿತ್ಸಾಲಯ | ಮಾರ್ಗನ್ಸ್‌ಗೇಟ್ |
| 66 | ಕಾರಾವಿಚಿಕಿತ್ಸಾಲಯ | ಪಣಂಬೂರು |
| 67 | ಕಾರಾವಿಚಿಕಿತ್ಸಾಲಯ | ಪುತ್ತೂರು |
| **ಹಾಸನಜಿಲ್ಲೆ** | | |
| 68 | ಕಾರಾವಿಚಿಕಿತ್ಸಾಲಯ | ಹಾಸನ |
| **ಮಂಡ್ಯಜಿಲ್ಲೆ** | | |
| 69 | ಕಾರಾವಿಚಿಕಿತ್ಸಾಲಯ | ಮಂಡ್ಯ |
| 70 | ಕಾರಾವಿಚಿಕಿತ್ಸಾಲಯ | ಬೆಳಗೊಳ |
| 71 | ಕಾರಾವಿಚಿಕಿತ್ಸಾಲಯ | ಮದ್ದೂರು |
| **ಮೈಸೂರುಜಿಲ್ಲೆ** | | |
| 72 | ಕಾರಾವಿಚಿಕಿತ್ಸಾಲಯ | ಬೆಳವಾಡಿ |
| 73 | ಕಾರಾವಿಚಿಕಿತ್ಸಾಲಯ | ಹುಣಸೂರು |
| 74 | ಕಾರಾವಿಚಿಕಿತ್ಸಾಲಯ | ಬೃಂದಾವನಬಡಾವಣೆ |
| 75 | ಕಾರಾವಿಚಿಕಿತ್ಸಾಲಯ | ಕೇಂದ್ರ, ಮೈಸೂರು |
| 76 | ಕಾರಾವಿಚಿಕಿತ್ಸಾಲಯ | ದಕ್ಷಿಣ, ಮೈಸೂರು |
| 77 | ಕಾರಾವಿಚಿಕಿತ್ಸಾಲಯ | ಎನ್.ಆರ್. ಮೊಹಲ್ಲಾ |
| 78 | ಕಾರಾವಿಚಿಕಿತ್ಸಾಲಯ | ನಂಜನಗೂಡು |
| 79 | ಕಾರಾವಿಚಿಕಿತ್ಸಾಲಯ | ಟಿ. ನರಸೀಪುರ |
| 80 | ಕಾರಾವಿಚಿಕಿತ್ಸಾಲಯ | ವಿ.ವಿ.ಪುರಂ |
| **ಉಡುಪಿಜಿಲ್ಲೆ** | | |
| 81 | ಕಾರಾವಿಚಿಕಿತ್ಸಾಲಯ | ಮಣಿಪಾಲ್ |
| 82 | ಕಾರಾವಿಚಿಕಿತ್ಸಾಲಯ | ಉಡುಪಿ |
| 83 | ಕಾರಾವಿಚಿಕಿತ್ಸಾಲಯ | ಕಾರ್ಕಳ |
| 84 | ಕಾರಾವಿಚಿಕಿತ್ಸಾಲಯ | ಕುಂದಾಪುರ |
| **ಬೆಳಗಾವಿಜಿಲ್ಲೆ** | | |
| 85 | ಕಾರಾವಿಚಿಕಿತ್ಸಾಲಯ | ಆನಂದವಾಡಿ (ಶಹಾಪುರ) |
| 86 | ಕಾರಾವಿಚಿಕಿತ್ಸಾಲಯ | ಪೀರನವಾಡಿ |
| 87 | ಕಾರಾವಿಚಿಕಿತ್ಸಾಲಯ | ಗೋಕಾಕ್ |
| 88 | ಕಾರಾವಿಚಿಕಿತ್ಸಾಲಯ | ಕೊಣ್ಣೂರು |
| 89 | ಕಾರಾವಿಚಿಕಿತ್ಸಾಲಯ | ಕೆ.ಎಸ್.ಆರ್.ಟಿ.ಸಿ. ಬೆಳಗಾವಿ |
| 90 | ಕಾರಾವಿಚಿಕಿತ್ಸಾಲಯ | ಉದ್ಯಮ್ ಭಾಗ (ಭಾಗ್ಯನಗರ) |

| | | |
|---|---|---|
| 91 | ಕಾರಾವಿಚಿಕಿತ್ಸಾಲಯ | ಯಮುನಾಪುರ |
| 92 | ಕಾರಾವಿಚಿಕಿತ್ಸಾಲಯ | ನಿಪ್ಪಾಣಿ |
| | **ಧಾರವಾಡಜಿಲ್ಲೆ** | |
| 93 | ಕಾರಾವಿಚಿಕಿತ್ಸಾಲಯ | ಧಾರವಾಡ |
| 94 | ಕಾರಾವಿಚಿಕಿತ್ಸಾಲಯ | ಹುಬ್ಬಳ್ಳಿ-1 |
| 95 | ಕಾರಾವಿಚಿಕಿತ್ಸಾಲಯ | ಬೇಲೂರು |
| 96 | ಕಾರಾವಿಚಿಕಿತ್ಸಾಲಯ | ತಾರಿಹಾಳ |
| 97 | ಕಾರಾವಿಚಿಕಿತ್ಸಾಲಯ | ಗೋಕುಲ |
| 98 | ಕಾರಾವಿಚಿಕಿತ್ಸಾಲಯ | ವರೂರು |
| | **ಗದಗಜಿಲ್ಲೆ** | |
| 99 | ಕಾರಾವಿಚಿಕಿತ್ಸಾಲಯ | ಗದಗ |
| 100 | ಕಾರಾವಿಚಿಕಿತ್ಸಾಲಯ | ಹುಲಕೋಟಿ |
| | **ಉತ್ತರಕನ್ನಡಜಿಲ್ಲೆ** | |
| 101 | ಕಾರಾವಿಚಿಕಿತ್ಸಾಲಯ | ದಾಂಡೇಲಿ |
| | **ಬಾಗಲಕೋಟೆಜಿಲ್ಲೆ** | |
| 102 | ಕಾರಾವಿಚಿಕಿತ್ಸಾಲಯ | ಬಾಗಲಕೋಟೆ |
| 103 | ಕಾರಾವಿಚಿಕಿತ್ಸಾಲಯ | ಬನಹಟ್ಟಿ |
| | **ಬಳ್ಳಾರಿಜಿಲ್ಲೆ** | |
| 104 | ಕಾರಾವಿಚಿಕಿತ್ಸಾಲಯ | ಬಳ್ಳಾರಿ |
| 105 | ಕಾರಾವಿಚಿಕಿತ್ಸಾಲಯ | ಟಿ.ಬಿ. ಡ್ಯಾಂ |
| | **ಬಿಜಾಪುರಜಿಲ್ಲೆ** | |
| 106 | ಕಾರಾವಿಚಿಕಿತ್ಸಾಲಯ | ಬಿಜಾಪುರ |
| | **ಗುಲ್ಬರ್ಗಾಜಿಲ್ಲೆ** | |
| 107 | ಕಾರಾವಿಚಿಕಿತ್ಸಾಲಯ | ಎಂ.ಎಸ್.ಕೆ. ಮಿಲ್ಸ್ |
| 108 | ಕಾರಾವಿಚಿಕಿತ್ಸಾಲಯ | ಮಳ್ಕೇಡ |
| 109 | ಕಾರಾವಿಚಿಕಿತ್ಸಾಲಯ | ಸೇಡಂ |
| 110 | ಕಾರಾವಿಚಿಕಿತ್ಸಾಲಯ | ಶಹಬಾದ್ |
| 111 | ಕಾರಾವಿಚಿಕಿತ್ಸಾಲಯ | ವಾಡಿ |
| | **ರಾಯಚೂರುಜಿಲ್ಲೆ** | |
| 112 | ಕಾರಾವಿಚಿಕಿತ್ಸಾಲಯ | ರಾಯಚೂರು |
| | **ಕೊಪ್ಪಳಜಿಲ್ಲೆ** | |
| 113 | ಕಾರಾವಿಚಿಕಿತ್ಸಾಲಯ | ಕೊಪ್ಪಳ |

# ಅನುಬಂಧ-2

<table>
<tr><th colspan="6">2020-21ನೇ ಸಾಲಿನ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ನಿಗದಿ ಮತ್ತು ಪರಿಷ್ಕರಣೆ ಕುರಿತ ಕನಿಷ್ಠ ಮತ್ತು ಗರಿಷ್ಠ ವೇತನ ದರಗಳ ವಿವರಣೆ</th></tr>
<tr><th rowspan="3">ಕ್ರ ಸಂ</th><th rowspan="3">ಅನುಸೂಚಿತ ಉದ್ದಿಮೆಯ ಹೆಸರು</th><th colspan="4">ಕನಿಷ್ಠ ವೇತನ ದರಗಳು (2020-21)</th></tr>
<tr><th colspan="2">ದೈನಿಕ</th><th colspan="2">ಮಾಸಿಕ</th></tr>
<tr><th>ಕನಿಷ್ಠ</th><th>ಗರಿಷ್ಠ</th><th>ಕನಿಷ್ಠ</th><th>ಗರಿಷ್ಠ</th></tr>
<tr><td>1</td><td>ಬೇಸಾಯ ಮತ್ತು ಸಂಬಂಧಿತ ಕೆಲಸಗಳಲ್ಲಿ ಉದ್ಯೋಗ</td><td>424.80</td><td>424.80</td><td>11044.76</td><td>11044.76</td></tr>
<tr><td>2</td><td>ಲಘು ಪಾನೀಯ ಸೋಡಾ ಸಹಿತ ಎಲ್ಲಾ ಇಂಗಾಲಾಮ್ಲಿತ ಪಾನೀಯ, ಮಿನರಲ್ (ಖನಿಜ) ನೀರು ಮತ್ತು ಜ್ಯೂಸ್ (ಹಣ್ಣಿನ ರಸ) ಉತ್ಪಾದನೆ ಹಾಗೂ ಸಂಬಂಧಪಟ್ಟ ಪ್ರಕ್ರಿಯೆಗಳಲ್ಲಿ ಉದ್ಯೋಗ.</td><td>415.12</td><td>490.12</td><td>10793.20</td><td>12743.00</td></tr>
<tr><td>3</td><td>ಅಗರಬತ್ತಿ ತಯಾರಿಕೆ ಮತ್ತು ಸಾಂಬ್ರಾಣಿ (ಇನ್‌ಸೆನ್ಸ್) ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗ</td><td>367.43</td><td>436.66</td><td>9553.20</td><td>11353.20</td></tr>
<tr><td>4</td><td>ಅಡಿಕೆ (ಸುಪಾರಿ)ಉದ್ದಿಮೆಗಳಲ್ಲಿ ಉದ್ಯೋಗ</td><td>434.80</td><td>495.49</td><td>11304.80</td><td>12882.63</td></tr>
<tr><td>5</td><td>ಸ್ವಯಂಯಾನ ಯಂತ್ರ ಶಾಸ್ತ್ರ (ಆಟೋಮೊಬೈಲ್ ಇಂಜಿನಿಯರಿಂಗ್) (ಉತ್ಪಾದನೆ, ಅಸೆಂಬ್ಲಿಂಗ್, ಬಾಡಿ ಬಿಲ್ಡಿಂಗ್, ಸರ್ವೀಸಿಂಗ್ ಮತ್ತು ರಿಪೇರಿ ಕೆಲಸಗಳ ಸಹಿತ)</td><td>450.12</td><td>541.12</td><td>11703.20</td><td>14069.20</td></tr>
<tr><td>6</td><td>ಬೇಕರಿ ಉದ್ದಿಮೆ ಮತ್ತು ಬೇಕಿಂಗ್ ಪ್ರಕ್ರಿಯೆಗಳಲ್ಲಿ ಉದ್ಯೋಗ.</td><td>434.80</td><td>643.01</td><td>11304.80</td><td>16718.20</td></tr>
<tr><td>7</td><td>ಬೀಡಿ ತಯಾರಿಕೆ ಪ್ರಕ್ರಿಯೆಯಲ್ಲಿ ಉದ್ಯೋಗ</td><td>435.68</td><td>574.14</td><td>11327.60</td><td>14927.60</td></tr>
<tr><td>8</td><td>ತಂಬಾಕು ಸಂಸ್ಕರಣಾ ಉದ್ದಿಮೆಗಳಲ್ಲಿ ಉದ್ಯೋಗ</td><td>434.80</td><td>643.01</td><td>11304.80</td><td>16718.20</td></tr>
<tr><td>9</td><td>ಬಿಸ್ಕತ್ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ</td><td>434.80</td><td>589.08</td><td>11304.80</td><td>15316.07</td></tr>
<tr><td>10</td><td>ಹಿತ್ತಾಳೆ, ತಾಮ್ರ, ಅಲ್ಯೂಮಿನಿಯಂ, ಉಕ್ಕು (ಸ್ಟೀಲ್), ಹಿಂಡಾಲಿಯಮ್ ಪಾತ್ರೆಗಳು ಮತ್ತು ಇತರೆ ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗ</td><td>434.80</td><td>643.01</td><td>11304.80</td><td>16718.20</td></tr>
</table>

| | | | | | |
|---|---|---|---|---|---|
| 11 | ಇಟ್ಟಿಗೆ ತಯಾರಿಕೆ ಹಾಗೂ ಪೂರ್ವ ಒತ್ತಡ (ಫ್ರೀ– ಸ್ಟ್ರೆಸ್‌ಡ್) ದೊಂದಿಗೆ ತಯಾರಿಸಿದ ಉತ್ಪನ್ನಗಳ ತಯಾರಿಕೆಯ ಉದ್ದಿಮೆಗಳಲ್ಲಿ ಉದ್ಯೋಗ | 434.80 | 484.30 | 11304.80 | 12591.92 |
| 12 | ಮರದ ಕೆಲಸ [ಕಾರ್ಪೆಂಟರಿ] ಹಾಗೂ ಮರ ಕೊಯ್ಯುವ [ಸಾಮಿಲ್] ಸಂಸ್ಥೆಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 13 | ಬೆಂಕಿ ಪೊಟ್ಟಣ ತಯಾರಿಕೆ ಉದ್ದಿಮೆಗಳಲ್ಲಿ ಉದ್ಯೋಗ | 324.52 | 349.56 | 8437.60 | 9088.60 |
| 14 | ಪ್ಲೈವುಡ್ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 15 | ಮರದ ದಿಮ್ಮಿಗಳ ಘಟಕಗಳಲ್ಲಿ ಉದ್ಯೋಗ. | 415.12 | 485.12 | 10793.20 | 12613.20 |
| 16 | ವಿನೀರ್ ಉದ್ದಿಮೆಗಳಲ್ಲಿ ಉದ್ಯೋಗ | 415.12 | 479.12 | 10793.20 | 12457.20 |
| 17 | ಏಲಕ್ಕಿ ಮಲ್ಲೈಗಳು ಮತ್ತು ಏಲಕ್ಕಿ ತೋಟಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 18 | ಗೋಡಂಬಿ ಸಂಸ್ಕರಣಾ ಉದ್ದಿಮೆಗಳಲ್ಲಿ ಉದ್ಯೋಗ. | 405.68 | 460.68 | 10547.60 | 11977.60 |
| 19 | ಜೇಡಿ ಮಣ್ಣಿನ ಮಡಿಕೆಗಳು, ಸಿರಾಮಿಕ್ಸ್ ಸ್ಟೋನ್ ವೇರ್ ಮತ್ತು ಇತರೆ ಉತ್ಪನ್ನಗಳ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ | 415.12 | 576.12 | 10793.20 | 14979.20 |
| 20 | ಸಿಂಕೋನಾ, ರಬ್ಬರ್, ಟೀ & ಕಾಫೀ ತೋಟಗಳಲ್ಲಿ ಉದ್ಯೋಗ (ಕಛೇರಿ ಸಿಬ್ಬಂದಿಗಳನ್ನು ಹೊರತುಪಡಿಸಿ) | 340.68 | 345.68 | 8857.60 | 8987.60 |
| 21 | ಸಿಂಕೋನಾ, ರಬ್ಬರ್, ಟೀ & ಕಾಫೀ ತೋಟಗಳಲ್ಲಿ ಉದ್ಯೋಗ (ಕಛೇರಿ ಸಿಬ್ಬಂದಿಗಳು) | 348.91 | 383.45 | 9071.60 | 9969.60 |
| 22 | ರಾಸಾಯನಿಕ ರಸಗೊಬ್ಬರ, ಕೀಟ ನಾಶಕ, ಕ್ರಿಮಿನಾಶಕ ಉತ್ಪಾದನಾ ಉದ್ದಿಮೆಯ ಕೆಲಸಗಳಲ್ಲಿ ಯೋಜನೆ | 434.80 | 643.01 | 11304.80 | 16718.20 |
| 23 | ಕ್ಲಬ್‌ಗಳಲ್ಲಿ ಉದ್ಯೋಗ | 415.12 | 480.12 | 10793.20 | 12483.20 |
| 24 | ಕಾಫಿ ಕ್ಯೂರಿಂಗ್ ಸಂಸ್ಥೆಗಳಲ್ಲಿ ಉದ್ಯೋಗ. | 434.68 | 538.95 | 11301.60 | 14012.60 |
| 25 | ಮಿಠಾಯಿ ತಯಾರಿಸುವ (ಕನ್‌ಫೆಕ್ಷನರಿ) ಉದ್ದಿಮೆಗಳಲ್ಲಿ ಉದ್ಯೋಗ. | 434.80 | 589.08 | 11304.80 | 15316.07 |
| 26 | ಹತ್ತಿ ಹೆಕ್ಕುವ, ಅಮಕುವ ಮತ್ತು ಸಂಬಂಧಪಟ್ಟ ಪ್ರಕ್ರಿಯೆಗಳ ಕೆಲಸಗಳಲ್ಲಿ ಉದ್ಯೋಗ. | 417.69 | 584.42 | 10859.88 | 15194.80 |

| | | | | | |
|---|---|---|---|---|---|
| 27 | ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಉದ್ಯೋಗ | 434.74 | 509.74 | 11303.20 | 13253.20 |
| 28 | ಗೃಹಕೃತ್ಯ ಸಹಾಯಕರು, ಮಕ್ಕಳ ಪೋಷಣಾ ಸಹಾಯಕರು, ಹೋಮ್ ನರ್ಸ್‌ಗಳ ಸಹಿತ ವಾಸದ ಮನೆಗಳಲ್ಲಿ ಗೃಹ ಕೆಲಸಗಳ ಉದ್ಯೋಗ | 434.74 | 539.74 | 11303.20 | 14033.20 |
| 29 | ಎಲೆಕ್ಟ್ರಾನಿಕ್ಸ್ ಉದ್ದಿಮೆಗಳಲ್ಲಿ ಉದ್ಯೋಗ | 415.12 | 510.12 | 10793.20 | 13263.20 |
| 30 | ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರೋಪ್ಲೇಟಿಂಗ್ ಉದ್ದಿಮೆಗಳಲ್ಲಿ ಉದ್ಯೋಗ. | 415.12 | 490.12 | 10793.20 | 12743.20 |
| 31 | ಅನುಸೂಚಿತ ಪಟ್ಟಿಗೆ ಸೇರದ ಉದ್ದಿಮೆಯ ಕೆಲಸದಲ್ಲಿ ಉದ್ಯೋಗ. ಕರ್ನಾಟಕ ರಾಜ್ಯ ತಳ ಹಂತದ ಕನಿಷ್ಠ ವೇತನ. | 434.80 | 643.01 | 11304.80 | 16718.20 |
| 32 | ಇಂಜಿನಿಯರಿಂಗ್, ಪ್ಯಾಬ್ರಿಕೇಷನ್ ಹಾಗೂ ಸಂಬಂಧಪಟ್ಟ ಉದ್ದಿಮೆಯ ಕೆಲಸಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 33 | ಚಲನಚಿತ್ರ (ಸಿನಿಮಾ / ಕಿರು ಚಿತ್ರ) ಉದ್ದಿಮೆಗಳ ನಿರ್ಮಾಣ, ವಿತರಣೆ, ಜಾಹಿರಾತು ಹಾಗೂ ಸಂಬಂಧಪಟ್ಟ ಕೆಲಸಗಳಲ್ಲಿ ಉದ್ಯೋಗ | 415.12 | 505.12 | 10793.20 | 13133.20 |
| 34 | ಮೀನು ಹಿಡಿಯುವುದು, ಮೀನು ಸಂಸ್ಕರಣೆ, ಮೀನು ಪೀಲಿಂಗ್, ಸೀಗಡಿ / ಏಡಿ ಸಂಸ್ಕರಣೆ ಹಾಗೂ ಕಪ್ಪೆ ಕಾಲು ರಫ್ತು ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | 440.12 | 590.12 | 11443.20 | 15343.20 |
| 35 | ಆಹಾರ ಸಂಸ್ಕರಣೆ ಮತ್ತು ಆಹಾರ ಪದಾರ್ಥಗಳ ಪ್ಯಾಕಿಂಗ್ (ಸಿದ್ಧ ತಿನಿಸುಗಳು, ಸಿದ್ಧ ಪಾನೀಯ ಹಾಗೂ ಮಸಾಲೆ ಸಹಿತ) ಪ್ರಕ್ರಿಯೆಗಳಲ್ಲಿ ಉದ್ಯೋಗ | 415.12 | 490.12 | 10793.20 | 12743.20 |
| 36 | ಅರಣ್ಯ ಮತ್ತು ಕಟ್ಟಿಗೆ ಡಿಪೋ (ಫಾರೆಸ್ಟ್ರಿ ಮತ್ತು ಟಿಂಬರಿಂಗ್) ಉದ್ದಿಮೆಗಳಲ್ಲಿ ಉದ್ಯೋಗ | 495.49 | 589.08 | 12882.63 | 15316.07 |
| 37 | ಫೌಂಡ್ರಿ (ಯಂತ್ರಗಳ ಸಹಿತ ಅಥವಾ ರಹಿತ ಮೆಷಿನ್ ಶಾಫ್) ಗಳಲ್ಲಿ ಉದ್ಯೋಗ | 415.12 | 541.12 | 10793.20 | 14069.20 |
| 38 | ಗಾಜು ಮತ್ತು ಗಾಜಿನ ಉತ್ಪನ್ನಗಳ ಸಂಸ್ಥೆಗಳಲ್ಲಿ ಉದ್ಯೋಗ | 440.12 | 495.12 | 11443.20 | 12873.20 |

| | | | | | |
|---|---|---|---|---|---|
| 39 | ಗ್ರಾನೈಟ್ ಕಲ್ಲುಗಳು ಹಾಗೂ ಮಾರ್ಬಲ್ ಉದ್ದಿಮೆಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 40 | ಕೈಮಗ್ಗ ಮತ್ತು ವಿದ್ಯುತ್‌ಚಾಲಿತ ಮಗ್ಗ [ಹತ್ತಿ] ಉದ್ದಿಮೆಗಳಲ್ಲಿ ಉದ್ಯೋಗ. | 393.37 | 456.83 | 10227.60 | 11877.60 |
| 41 | ಆಸ್ಪತ್ರೆಗಳು, ಪ್ರಸವಾಲಯಗಳು (ಮೆಟರ್ನಿಟಿ ಹೋಂಗಳು), ಶುಶ್ರೂಷಾಲಯ (ನರ್ಸಿಂಗ್ ಹೋಂಗಳು) ಕ್ಲಿನಿಕ್, ಹಾಗೂ ವ್ಯಸನ ಮುಕ್ತ ಕೇಂದ್ರಗಳಲ್ಲಿ ಉದ್ಯೋಗ | 434.74 | 514.74 | 11303.20 | 13383.20 |
| 42 | ವಸತಿ ನಿಲಯಗಳು (ಹಾಸ್ಟೆಲ್‌ಗಳು), ಅತಿಥಿ ಗೃಹಗಳು, ಹೋಮ್ ಸ್ಟೇಗಳು, ಪೇಯಿಂಗ್ ಗೆಸ್ಟ್ ಸಂಸ್ಥೆಗಳು, ಸರ್ವೀಸ್ಡ್ ಅಪಾರ್ಟ್‌ಮೆಂಟ್‌ಗಳು, ರೆಸಿಡೆಂಟ್ಸ್ ಅಸೋಸಿಯೇಷನ್, ಮದುವೆ ಹಾಗೂ ಸಮುದಾಯ ಭವನಗಳಲ್ಲಿ ಉದ್ಯೋಗ | 415.12 | 520.12 | 10793.20 | 13523.20 |
| 43 | ಹೋಟೆಲ್ / ವಸತಿ ಸಹಿತ ಹೋಟೆಲ್‌ಗಳು, ರೆಸ್ಟೋರೆಂಟ್ ಮೊಟೆಲ್‌ಗಳು, ಲಾಡ್ಜ್‌ಗಳು, ಡಾಬಾಗಳು, ಕ್ಯಾಂಟೀನ್, ಹೊರಾಂಗಣ ಆಹಾರ ತಯಾರಿಕೆ ಹಾಗೂ ಸರಬರಾಜು (ಕೇಟರಿಂಗ್) ಮತ್ತು ಸಂಬಂಧಪಟ್ಟ ಸಂಸ್ಥೆಗಳಲ್ಲಿ ಉದ್ಯೋಗ | 415.12 | 520.12 | 10793.20 | 13523.20 |
| 44 | ಮಂಜುಗಡ್ಡೆ ಕಾರ್ಖಾನೆ (ಐಸ್ ಫ್ಯಾಕ್ಟರಿ) ಐಸ್ ಕ್ರೀಮ್ ಹಾಗೂ ಶೀತಲ ಸಂರಕ್ಷಣಾ ಸಂಸ್ಥೆಗಳಲ್ಲಿ ಉದ್ಯೋಗ. | 440.12 | 502.12 | 11443.20 | 13055.20 |
| 45 | ಖಂಡಸಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 46 | ಬಟ್ಟೆ ಒಗೆಯುವ, ಡ್ರೈಕ್ಲೀನ್ ಮತ್ತು ಲಾಂಡ್ರಿ ಉದ್ದಿಮೆಗಳ ಕೆಲಸಗಳಲ್ಲಿ ಉದ್ಯೋಗ | 415.12 | 505.12 | 10793.20 | 13133.20 |
| 47 | ಮದ್ಯ ತಯಾರಿಕಾ (ಡಿಸ್ಟಿಲರೀಸ್ ಹಾಗೂ ಬ್ರಿವರೀಸ್), ಬಾಟಲಿಂಗ್ ಹಾಗೂ ಪ್ಯಾಕಿಂಗ್ ಸಹಿತ ಉದ್ದಿಮೆಗಳ ಕೆಲಸಗಳಲ್ಲಿ ಉದ್ಯೋಗ | 415.12 | 490.12 | 10793.20 | 12743.20 |

| | | | | | |
|---|---|---|---|---|---|
| 48 | ಆಯುರ್ವೇದ, ಯೋಗ, ಯುನಾನಿ, ಸಿದ್ಧ ಹೋಮಿಯೋಪತಿ (ಆಯುಷ್) ಹಾಗೂ ಅಲೋಪಥಿಕ್ ಔಷಧಿಗಳ ತಯಾರಿಕೆಯಲ್ಲಿ ಉದ್ಯೋಗ. (ಉತ್ಪಾದನೆ, ವಿತರಣೆ ಜಾಹಿರಾತು ವಿಭಾಗಗಳ ಸಹಿತ) | 415.12 | 515.12 | 10793.20 | 13393.20 |
| 49 | ಅಕ್ಕಿ, ಭತ್ತ, ಜೋಳ ಅಥವಾ ಇನ್ನಿತರ ಧಾನ್ಯಗಳಿಂದ ಮಂಡಕ್ಕಿ, ಅವಲಕ್ಕಿ, ಚುರುಮುರಾ, ಮುರುಮುರಾ ಹಾಗೂ ಇತರೆ ಉತ್ಪನ್ನಗಳನ್ನು ತಯಾರಿಸುವ ಉದ್ದಿಮಗಳ ಕೆಲಸದಲ್ಲಿ ಉದ್ಯೋಗ | 434.80 | 589.08 | 11304.80 | 15316.07 |
| 50 | ಮೆಟಲ್ ರೋಲಿಂಗ್ ಅಂಡ್ ರೀರೋಲಿಂಗ್– [ಫೆರಸ್] ಉದ್ದಿಮೆಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 51 | ಮೆಟಲ್ ರೋಲಿಂಗ್ ಅಂಡ್ ರೀರೋಲಿಂಗ್ ಉದ್ದಿಮೆಗಳಲ್ಲಿ ಉದ್ಯೋಗ. [ನಾನ್–ಫೆರಸ್] | 434.80 | 643.01 | 11304.80 | 16718.20 |
| 52 | ಲಘು ಸಿಮೆಂಟ್ ಸ್ಥಾವರಗಳಲ್ಲಿ ಉದ್ಯೋಗ. | 415.12 | 480.12 | 10793.20 | 12483.20 |
| 53 | ಮೊಸಾಯಿಕ್ ಹಂಚುಗಳು, ಎಲ್ಲಾ ರೀತಿಯ ನೆಲ ಹಾಸು ಹಂಚುಗಳು, ಹೊಳಪಿನ ಹಂಚುಗಳ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 54 | ಎಣ್ಣೆ ಮಿಲ್‌ಗಳಲ್ಲಿ ಉದ್ಯೋಗ. | 415.12 | 485.12 | 10793.20 | 12613.20 |
| 55 | ಪೆಟ್ರೋಲ್, ಡೀಸೆಲ್ ಆಯಿಲ್ ಮತ್ತು ಎಲ್.ಪಿ.ಜಿ. ಪಂಪ್‌ಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 56 | ಪ್ಲಾಸ್ಟಿಕ್, ಪಾಲಿ ಪ್ಲಾಸ್ಟಿಕ್, ರಬ್ಬರ್, ಪಿವಿಸಿ ಪೈಪ್ಸ್ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 415.12 | 480.12 | 10793.20 | 12483.20 |
| 57 | ಮುದ್ರಣ ಹಾಗೂ ಪ್ರಸರಣಾ ಉದ್ದಿಮೆಗಳಲ್ಲಿ ಉದ್ಯೋಗ | 415.12 | 576.12 | 10793.20 | 14979.20 |
| 58 | ಖಾಸಗಿ ವಿತ್ತ ನಿಗಮಗಳು, (ಫೈನಾನ್ಸ್ ಕಾರ್ಪೋರೇಷನ್) ಚಿಟ್ ಫಂಡ್‌ಗಳು ಹಾಗೂ ಕಾನೂನು ಬದ್ಧ ಬ್ಯಾಂಕಿಂಗ್ ರಹಿತ ನಗದು ವಹಿವಾಟು ಸಂಸ್ಥೆಗಳಲ್ಲಿ ಉದ್ಯೋಗ | 415.12 | 580.12 | 10793.20 | 15083.20 |

| | | | | | |
|---|---|---|---|---|---|
| 59 | ಶೌಚಾಲಯಗಳು, ಸ್ನಾನಗೃಹಗಳು, ಒಳಚರಂಡಿಗಳನ್ನು ಶುಚಿ ಮಾಡುವ (Scavenging) ಕೆಲಸಗಳಲ್ಲಿ ಉದ್ಯೋಗ. (ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೊರತುಪಡಿಸಿ). | 574.74 | 624.74 | 14943.20 | 16243.20 |
| 60 | ಹಾಲು ಶೇಖರಣೆ, ಸಂಸ್ಕರಣೆ ಹಾಗೂ ವಿತರಣಾ ಪ್ರಕ್ರಿಯೆಯ ಉದ್ದಿಮೆಗಳಲ್ಲಿ ಉದ್ಯೋಗ | 415.12 | 490.12 | 10793.20 | 12743.20 |
| 61 | ಸಾರ್ವಜನಿಕ ಸಾರಿಗೆ ಸಂಸ್ಥೆಗಳ ಉದ್ದಿಮೆಗಳಲ್ಲಿ ಉದ್ಯೋಗ | 415.12 | 515.12 | 10793.20 | 13393.20 |
| 62 | ಕಾಗದ, ಪಲ್ಪ್ ಕಾಗದ, ರಟ್ಟಿನ ಹಲಗೆ (ಕಾರ್ಡ್‌ಬೋರ್ಡ್), ಹುಲ್ಲಿನ ಹಲಗೆ (ಸ್ಟ್ರಾ ಬೋರ್ಡ್) ಮತ್ತು ನ್ಯೂಸ್ ಪ್ರಿಂಟ್ ಉದ್ದಿಮೆಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 63 | ಅಕ್ಕಿ, ಧಾನ್ಯಗಳು ಮತ್ತು ಬೇಳೆ ಗಿರಣಿ ಉದ್ದಿಮೆಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 64 | ರಬ್ಬರ್ ಉತ್ಪನ್ನಗಳು (ಪೋಮ್ ಮತ್ತು ಕಾಯರ್ ರಬ್ಬರ್ ಸಹಿತ) ಉದ್ದಿಮೆಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 65 | ಔಷಧಿಗಳು, ಗೃಹಪಯೋಗಿ ವಸ್ತುಗಳ ವೃತ್ತಿಪರ ಪ್ರವರ್ತಕ ಮತ್ತು ಮಾರಾಟದಲ್ಲಿ ಉದ್ಯೋಗ | 415.12 | 510.12 | 10793.20 | 13263.20 |
| 66 | ಭದ್ರತಾ ಏಜೆನ್ಸಿಗಳಲ್ಲಿ ಉದ್ಯೋಗ. (ಕಛೇರಿ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಏಜೆನ್ಸಿಯ ಮೂಲಕ ನಿಯೋಜಿಸಿಕೊಳ್ಳುವ ಎಲ್ಲಾ ಸಂಸ್ಥೆಗಳು ಹಾಗೂ ಉದ್ದಿಮೆಗಳ ಸಹಿತ). | 469.82 | 560.12 | 12215.20 | 14563.20 |
| 67 | ರೇಷ್ಮೆ ಘಟಕಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಉದ್ಯೋಗ ಭಾಗ-1 | 418.74 | 589.08 | 10887.20 | 15316.07 |
| 68 | ರೇಷ್ಮೆ ಘಟಕಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಉದ್ಯೋಗ ಭಾಗ-2 | 434.80 | 643.01 | 11304.80 | 16718.20 |
| 69 | ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 70 | ಸ್ಪಿನ್ನಿಂಗ್ ಮಿಲ್ ಉದ್ದಿಮೆಗಳಲ್ಲಿ ಉದ್ಯೋಗ | 343.84 | 376.38 | 8939.91 | 9785.88 |

| | | | | | |
|---|---|---|---|---|---|
| 71 | ಸ್ಪನ್ ಪೈಪುಗಳು, ಕಾಂಕ್ರೀಟ್ ಪೈಪುಗಳು, ಸಾನಿಟರಿ ಫಿಟ್ಟಿಂಗ್‌ಗಳು, ಪ್ಲೈನ್ ಸಿಮೆಂಟ್ ಕಾಂಕ್ರೀಟ್ (ಪಿ.ಸಿ.ಸಿ.) ಹಾಗೂ ರೀ–ಇನ್‌ಪೋರ್ಸ್‌ಡ್ ಸಿಮೆಂಟ್ ಕಾಂಕ್ರೀಟ್ (ಆರ್.ಸಿ.ಸಿ). ಪೈಪುಗಳು ಮತ್ತು ಕಂಬಗಳ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 415.12 | 515.12 | 10793.20 | 13393.20 |
| 72 | ಲೋಹದ ಅಲ್ಮೇರಾಗಳು, ಕುರ್ಚಿಗಳು, ಮೇಜುಗಳು ಹಾಗೂ ಇತರೆ ಪೀಠೋಪಕರಣಗಳನ್ನು ಉತ್ಪಾದಿಸುವ ಉದ್ದಿಮೆಗಳಲ್ಲಿ ಉದ್ಯೋಗ | 415.12 | 515.12 | 10793.20 | 13393.20 |
| 73 | ಕಲ್ಲು ಒಡೆಯುವುದು ಮತ್ತು ಕಲ್ಲು ಪುಡಿ ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | 434.80 | 681.45 | 11304.80 | 17717.80 |
| 74 | ಚರ್ಮ ಹದ ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | 328.78 | 368.17 | 8548.40 | 9572.40 |
| 75 | ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ | 337.53 | 397.33 | 8775.90 | 10330.46 |
| 76 | ರೇಷ್ಮೆ ಬಟ್ಟೆಗಳ (ಸಿಲ್ಕ್) ಉದ್ದಿಮೆಗಳಲ್ಲಿ ಉದ್ಯೋಗ | 314.49 | 383.61 | 10474.99 | 11151.02 |
| 77 | ಹೆಂಚು ತಯಾರಿಕೆ ಉದ್ದಿಮೆಗಳಲ್ಲಿ ಉದ್ಯೋಗ | 434.80 | 681.45 | 11304.80 | 17717.80 |
| 78 | ಶೇಂದಿ ಇಳಿಸುವ ಉದ್ದಿಮೆಗಳಲ್ಲಿ ಉದ್ಯೋಗ | 434.80 | 681.45 | 11304.80 | 17717.80 |
| 79 | ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಉದ್ಯೋಗ | 450.12 | 627.82 | 11703.20 | 16323.20 |
| 80 | ಸಹಕಾರ ಸೊಸೈಟಿಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 81 | ಚಿನ್ನ ಮತ್ತು ಬೆಳ್ಳಿ ಆಭರಣಗಳ ತಯಾರಿಕೆ ಮತ್ತು ಹರಳುಗಳು, ವಜ್ರಗಳನ್ನು ಕತ್ತರಿಸುವುದು, ಹೊಳಪು ಗೊಳಿಸುವ ಉದ್ದಿಮೆಗಳಲ್ಲಿ ಉದ್ಯೋಗ | 434.80 | 643.01 | 11304.80 | 16718.20 |
| 82 | ಬಟ್ಟೆಗಳಿಗೆ ಬಣ್ಣ ಹಾಕುವ (ಡೈ) ಮತ್ತು ಅಚ್ಚು ಹಾಕುವ (ಪ್ರಿಂಟ್) ಹಾಕುವ ಉದ್ದಿಮೆಗಳಲ್ಲಿ ಉದ್ಯೋಗ | 360.76 | 420.84 | 9379.83 | 10941.87 |

ಅನುಬಂಧ-3

## ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಯೋಜನೆಗಳು. ಮಾನದಂಡಗಳು ಹಾಗೂ ಕಳೆದೆರಡು ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಪ್ರಯೋಜನ ಪಡೆದಿರುವ ಕಾರ್ಮಿಕರ ಸಂಖ್ಯೆಯ ವಿವರ:

### (1) ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-

ಈ ಯೋಜನೆಯಡಿ, ಸಾರಿಗೆ ಇಲಾಖೆಯಲ್ಲಿ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಲಾಯಿಸಲು ಊರ್ಜಿತ ಚಾಲನಾ ಪರವಾನಗಿ ಹೊಂದಿದ ಚಾಲಕರು, ಯೋಜನೆಯಡಿ ನೋಂದಾಯಿತ ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಪ್ರಮುಖವಾಗಿ ಅಪಘಾತ ಪರಿಹಾರ ಸೌಲಭ್ಯ ಒದಗಿಸಲಾಗುತ್ತಿದೆ.

(ಅ) ಅಪಘಾತ ಪರಿಹಾರ

ಮಾನದಂಡಗಳು:-

- ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.
- ಯೋಜನೆಯು ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಾದ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಅನ್ವಯಿಸುತ್ತದೆ.
- ವಯೋಮಿತಿ 20 ರಿಂದ 70 ವರ್ಷಗಳು.
- ಯೋಜನೆಯ ಸೌಲಭ್ಯಗಳು ಕರ್ತವ್ಯದಲ್ಲಿರುವಾಗ ಹಾಗೂ ಇಲ್ಲದಿರುವಾಗಲೂ ಸಂಭವಿಸಿದ ಅಪಘಾತ ಪ್ರಕರಣಗಳಲ್ಲಿ ಸಹ ಲಭ್ಯವಾಗುತ್ತವೆ.
- ಚಾಲಕರು, ಕರ್ನಾಟಕ ರಾಜ್ಯ ಸಾರಿಗೆ ಇಲಾಖೆಯಿಂದ ವಾಣಿಜ್ಯ ವಾಹನ ಚಲಾಯಿಸಲು ಊರ್ಜಿತ ಚಾಲನಾ ಪರವಾನಗಿಯನ್ನು ಹೊಂದಿರಬೇಕು.
- ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಈವರೆಗೆ 34 "ಅಪಘಾತ ಪ್ರಕರಣ"ಗಳಲ್ಲಿ ರೂ. 97,74,924/-ಗಳ ಅಪಘಾತ ಪರಿಹಾರ ನೀಡಲಾಗಿದೆ.
- (ಆ) ಶೈಕ್ಷಣಿಕ ಧನಸಹಾಯ:-
  - ಫಲಾನುಭವಿಯ ಪೋಷಕರು ಖಾಸಗಿ ವಾಣಿಜ್ಯ ಚಾಲಕರಾಗಿದ್ದು, ಅಪಘಾತದಿಂದ ಮರಣ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿರಬೇಕು.
  - 1 ರಿಂದ 12ನೇತರಗತಿಯವರೆಗೆ ವ್ಯಾಸಂಗ ಮಾಡುತಿರಬೇಕು. ಹಾಗೂ ಈ ಕುರಿತು ದಾಖಲೆಗಳನ್ನು ಸಲ್ಲಿಸಬೇಕು.
  - ಈವರೆಗೆ 8 ವಿದ್ಯಾರ್ಥಿಗಳಿಗೆ ತಲಾ ರೂ.10000/-ಗಳಂತೆ ರೂ.80,000/- ಗಳ "ಶೈಕ್ಷಣಿಕ ಧನಸಹಾಯ" ವಿತರಿಸಲಾಗಿದೆ.

### (2) ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ (ಸ್ಮಾರ್ಟ್‌ಕಾರ್ಡ್) ಯೋಜನೆ

ಈ ಯೋಜನೆಯಡಿ ಪ್ರಸ್ತುತ 11 ವಲಯಗಳಾದ ಹಮಾಲರು, ಗೃಹಕಾರ್ಮಿಕರು, ಚಿಂದಿ ಆಯುವವರು, ಟೈಲರ್‌ಗಳು, ಮೆಕ್ಯಾನಿಕ್ಸ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ ವೃತ್ತಿಯಲ್ಲಿ ತೊಡಗಿರುವ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಗುರುತಿನ ಚೀಟಿಯನ್ನು ನೀಡಲಾಗುತ್ತಿದೆ.

ಮಾನದಂಡಗಳು:-

- ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.
- ವಯೋಮಿತಿ 18 ರಿಂದ 60 ವರ್ಷಗಳು.
- ಪ್ರಸ್ತುತ 11 ವಲಯಗಳಾದ ಹಮಾಲರು, ಗೃಹಕಾರ್ಮಿಕರು, ಚಿಂದಿ ಆಯುವವರು, ಟೈಲರ್‌ಗಳು, ಮೆಕ್ಯಾನಿಕ್ಸ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ ವೃತ್ತಿಯ ಅಸಂಘಟಿತ ಕಾರ್ಮಿಕರಿಗೆ ಮಾತ್ರ ಅನ್ವಯಿಸುತ್ತದೆ.
- ಕಳೆದೆರಡು ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ 11 ವಲಯಗಳ 1448 ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್‌ಕಾರ್ಡ್ ವಿತರಿಸಲಾಗಿದೆ.

**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಪ್ರಯೋಜನ ಪಡೆದ ಫಲಾನುಭವಿಗಳ ತಾಲ್ಲೂಕುವಾರು ವಿವರ**

| ಕ್ರ.ಸಂ | ತಾಲ್ಲೂಕು | ಅಪಘಾತ ಪರಿಹಾರ ಯೋಜನೆ | ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ |
|---|---|---|---|
| 1 | ಹಾಸನ | 20 | 353 |
| 2 | ಸಕಲೇಶಪುರ | 03 | 86 |
| 3 | ಆಲೂರು | 01 | 35 |
| 4 | ಚನ್ನರಾಯಪಟ್ಟಣ | 05 | 141 |
| 5 | ಹೊಳೆನರಸಿಪುರ | 01 | 111 |
| 6 | ಹರಕಲಗೂಡು | 01 | 124 |
| 7 | ಅರಸಿಕೇರೆ | 01 | 286 |
| 8 | ಬೇಲೂರು | 02 | 312 |
| ಒಟ್ಟು | | **34** | **1448** |

**(3) ಕೇಂದ್ರ ಸರ್ಕಾರದ ವಂತಿಕೆ ಆಧಾರಿತ ಮಾಸಿಕ ಪಿಂಚಣಿ ಯೋಜನೆ:**

ಅ) **ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್‌ಧನ್ ಯೋಜನೆ** (ಪಿಎಂ-ಎಸ್‌ವೈಎಂ) ಈ ಯೋಜನೆಯಡಿ ನೋಂದಾಯಿತ ಅಸಂಘಟಿತ ವಲಯದ ಕಾರ್ಮಿಕರು 60 ವರ್ಷ ಪೂರೈಸಿದ ನಂತರ ಮಾಸಿಕ ನಿಶ್ಚಿತ ರೂ.3000/-ಗಳ ಪಿಂಚಣಿ ಸೌಲಭ್ಯ ಒದಗಿಸಲಾಗುತ್ತದೆ.

ಮಾನದಂಡಗಳು:-

- ಅಸಂಘಟಿತ ವಲಯದ ಕಾರ್ಮಿಕರಾಗಿದ್ದು 18-40 ವರ್ಷದೊಳಗಿರಬೇಕು.
- ಮಾಸಿಕ ಆದಾಯ ರೂ.15,000/- ಕ್ಕಿಂತ ಕಡಿಮೆಯಿರಬೇಕು.

- ಆದಾಯ ತೆರಿಗೆ/ಇಎಸ್‌ಐ/ ಇಪಿಎಫ್‌ಓ/ ನ್ಯಾಷನಲ್ ಪೆನ್‌ಷನ್ ಸ್ಕೀಮ್ ವ್ಯಾಪ್ತಿಗೆ ಒಳಪಟ್ಟಿರಬಾರದು.
- ಈ ಯೋಜನೆಯಡಿ ಇಲ್ಲಿಯವರೆಗೆ ಹಾಸನ ಜಿಲ್ಲೆಗೆ ಸಂಬಂಧಿಸಿದ ಒಟ್ಟು 2535 ಕಾರ್ಮಿಕರನ್ನು ಫಲಾನುಭವಿಯಾಗಿ ನೋಂದಾಯಿಸಲಾಗಿದೆ. ಈ ಕುರಿತು ತಾಲ್ಲೂಕುವಾರು ಮಾಹಿತಿ ಲಭ್ಯವಿರುವುದಿಲ್ಲ.

**ಆ) ಎನ್.ಪಿ. ಎಸ್ ಫಾರ್ ಟ್ರೇಡರ್ಸ್ ಯೋಜನೆ**

ಈ ಯೋಜನೆಯಡಿ ನೋಂದಾಯಿತ ಅಂಗಡಿ ಮಾಲೀಕರು, ಚಿಲ್ಲರೆ ವ್ಯಾಪಾರಿಗಳು, ಅಕ್ಕಿ ಗಿರಣಿ ಮಾಲೀಕರು, ಎಣ್ಣೆ ಗಿರಣಿ ಮಾಲೀಕರು, ವರ್ಕ್‌ಶಾಪ್ ಮಾಲೀಕರು, ಕಮಿಷನ್ ಏಜೆಂಟ್ಸ್, ರಿಯಲ್ ಎಸ್ಟೇಟ್‌ನ ಬ್ರೋಕರ್ಸ್, ಸಣ್ಣ ಹೋಟೆಲ್ ಹಾಗೂ ರೆಸ್ಟೋರೆಂಟ್‌ನ ಮಾಲೀಕರು ಹಾಗೂ ಅಂತಹ ಇತರೆ ಸಣ್ಣ ವ್ಯಾಪಾರಗಳಲ್ಲಿ ತೊಡಗಿಸಿಕೊಂಡ ವ್ಯಾಪಾರಿಗಳು/ಲಘು ವ್ಯಾಪಾರಿಗಳು ಹಾಗೂ ಸ್ವಯಂ ಉದ್ಯೋಗಿಗಳು 60 ವರ್ಷ ಪೂರೈಸಿದ ನಂತರ ಮಾಸಿಕ ನಿಶ್ಚಿತ ರೂ.3000/–ಗಳ ಪಿಂಚಣಿ ಸೌಲಭ್ಯ ಒದಗಿಸಲಾಗುತ್ತದೆ.

**ಮಾನದಂಡಗಳು:–**

- 18ರಿಂದ 40 ವರ್ಷದವರಾಗಿರಬೇಕು.
- ವಾರ್ಷಿಕ ವಹಿವಾಟು ಗರಿಷ್ಠ ರೂ. 1.50 ಕೋಟಿಗಳ ಒಳಗಿರಬೇಕು.
- ಆದಾಯ ತೆರಿಗೆ ಪಾವತಿಸುವವರಾಗಿರಬಾರದು. ಇ.ಎಸ್.ಐ/ಇ.ಪಿ.ಎಫ್/ಎನ್.ಪಿ.ಎಸ್/ ಪಿಎಂಎಸ್‌ವೈಎಂ/ಪಿ.ಎಂ.ಕೆ.ಎಂ.ವೈ. ಯೋಜನೆಯ ಫಲಾನುಭವಿಗಳಾಗಿರಬಾರದು.

ಈ ಯೋಜನೆಯಡಿ ಇಲ್ಲಿಯವರೆಗೆ ಹಾಸನ ಜಿಲ್ಲೆಗೆ ಸಂಬಂಧಿಸಿದ ಒಟ್ಟು 27 ಕಾರ್ಮಿಕರನ್ನು ಫಲಾನುಭವಿಯಾಗಿ ನೋಂದಾಯಿಸಲಾಗಿದೆ. ಈ ಕುರಿತು ತಾಲ್ಲೂಕುವಾರು ಮಾಹಿತಿ ಲಭ್ಯವಿರುವುದಿಲ್ಲ.

# ಅನುಬಂಧ-04

## ಕನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಯೋಜನೆಗಳು ಮಾನದಂಡಗಳು ಹಾಗೂ ಕಳೆದೆರಡು ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಪ್ರಯೋಜನ ಪಡೆದಿರುವ ಕಾರ್ಮಿಕರ ಸಂಖ್ಯೆಯ ವಿವರ:

### ಫಲಾನುಭವಿಗಳಿಗೆ ಸಿಗುವ ಸೌಲಭ್ಯಗಳು

1. ಪಿಂಚಣಿ ಸೌಲಭ್ಯ: ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.2,000/-
2. ಕುಟುಂಬ ಪಿಂಚಣಿ ಸೌಲಭ್ಯ: ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ ರೂ.1000/-
3. ದುರ್ಬಲತೆ ಪಿಂಚಣಿ: ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.2,000/- ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ.2,00,000/- ದವರೆಗೆ ಅನುಗ್ರಹ ರಾಶಿ ಸಹಾಯಧನ.
4. ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ ಮರುಪಾವತಿ ಸೌಲಭ್ಯ.
5. ಟ್ರೈನಿಂಗ್-ಕಮ್-ಟೂಲ್‌ಕಿಟ್ ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.30,000/- ವರೆಗೆ
6. ಶ್ರಮ ಸಂಸಾರ ಸಾಮರ್ಥ್ಯ ತರಬೇತಿ ಸೌಲಭ್ಯ: ನೋಂದಾಯಿತ ಫಲಾನುಭವಿಯ ಅವಲಂಬಿತರಿಗೆ
7. ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ): ರೂ.2,00,000/- ದವರೆಗೆ ಮುಂಗಡ ಸೌಲಭ್ಯ
8. ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್): ಮಹಿಳಾ ಫಲಾನುಭವಿಯ ಮೊದಲ ಎರಡು ಮಕ್ಕಳಿಗೆ ಹೆಣ್ಣು ಮಗುವಿನ ಜನನಕ್ಕೆ ರೂ. 30,000/- ಮತ್ತು ಗಂಡು ಮಗುವಿನ ಜನನಕ್ಕೆ ರೂ.20,000/-
9. ಶಿಶು ಪಾಲನಾ ಸೌಲಭ್ಯ:
10. ಅಂತ್ಯಕ್ರಿಯೆ ವೆಚ್ಚ : ರೂ.4,000/- ಹಾಗೂ ಅನುಗ್ರಹ ರಾಶಿ ರೂ.50,000/-ಸಹಾಯಧನ
11. ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

| ಕ್ರ.ಸಂ | ತರಗತಿ (ಉತ್ತೀರ್ಣಕ್ಕೆ) | ವಾರ್ಷಿಕ ಸಹಾಯ ಧನ | |
|---|---|---|---|
| | | ಗಂಡು | ಹೆಣ್ಣು |
| I. | ನರ್ಸರಿ | 3,000 | 4,000 |
| II. | 1 ರಿಂದ 4ನೇ ತರಗತಿ | 3,000 | 4,000 |
| III. | 5 ರಿಂದ 8ನೇ ತರಗತಿ | 5,000 | 6,000 |
| IV. | 9 ಹಾಗೂ 10ನೇ ತರಗತಿ | 10,000 | 11,000 |
| V. | ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ | 10,000 | 14,000 |
| VI. | ಐಟಿಐ | 12,000 | 15,000 |
| VII. | ಪದವಿ ಪ್ರತಿ ವರ್ಷಕ್ಕೆ | 15,000 | 20,000 |
| VIII. | ಸ್ನಾತಕೋತ್ತರ ಪದವಿ ಸೇರ್ಪಡೆಗೆ | 20,000 | 20,000 |
| | ಮತ್ತು ಪ್ರತಿ ವರ್ಷಕ್ಕೆ | 20,000 | 25,000 |
| IX. | ಇಂಜಿನಿಯರಿಂಗ್ ಕೋರ್ಸ್ ಬಿಇ/ ಬಿ.ಟೆಕ್ ಸೇರ್ಪಡೆಗೆ | 25,000 | 25,000 |
| | ಮತ್ತು ಪ್ರತಿ ವರ್ಷಕ್ಕೆ | 25,000 | 30,000 |
| X. | ವೈದ್ಯಕೀಯ ಕೋರ್ಸ್‌ಗೆ ಸೇರ್ಪಡೆಗೆ | 30,000 | 30,000 |
| | ಮತ್ತು ಪ್ರತಿ ವರ್ಷಕ್ಕೆ | 40,000 | 50,000 |
| XI. | ಡಿಪ್ಲೋಮಾ | 15,000 | 20,000 |
| XII. | ಎಂ.ಟೆಕ್ / ಎಂ.ಇ | 30,000 | 35,000 |
| XIII. | ಎಂ.ಡಿ (ವೈದ್ಯಕೀಯ) | 45,000 | 55,000 |
| XIV. | ಪಿಹೆಚ್‌ಡಿ (ಪ್ರತಿ ವರ್ಷಕ್ಕೆ) ಗರಿಷ್ಠ 03 ವರ್ಷ | 25,000 | 30,000 |

12. **ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ)**: ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ **ರೂ.300/-** ರಿಂದ **ರೂ.10,000/-ವರೆಗೆ**

13. **ಅಪಘಾತ ಪರಿಹಾರ**: ಮರಣ ಹೊಂದಿದ್ದಲ್ಲಿ **ರೂ.5,00,000/-**, ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ **ರೂ.2,00,000/- ಮತ್ತು** ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ **ರೂ.1,00,000/-**

14. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ)**: ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/-**ವರೆಗೆ

15. **ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್)**: ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ ರೂ.50,000/-

16. **LPG ಸಂಪರ್ಕ ಸೌಲಭ್ಯ (ಕಾರ್ಮಿಕ ಅನಿಲ ಭಾಗ್ಯ)**: ಅನಿಲ ಸಂಪರ್ಕದೊಂದಿಗೆ ಎರಡು ಬರ್ನರ್ ಸ್ಟೌವ್

17. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ**: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ

18. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ**: ರಾಜ್ಯಾದ್ಯಂತ ವಿದ್ಯಾಭ್ಯಾಸದಲ್ಲಿ ತೊಡಗಿರುವ ನೋಂದಾಯಿತ ಕಾರ್ಮಿಕರ ಇಬ್ಬರು ಮಕ್ಕಳಿಗೆ ( ಈ ಯೋಜನೆಯನ್ನು ಜಾರಿಗೊಳಿಸಲಾಗುವುದು)

19. **ತಾಯಿ ಮಗು ಸಹಾಯ ಹಸ್ತ**: ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ **ರೂ.6,000/-** ಗಳ ಸಹಾಯಧನ.

## ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಸೌಲಭ್ಯಗಳನ್ನು ಪಡೆಯಲು ಸಲ್ಲಿಸಬೇಕಾದ ದಾಖಲೆಗಳು:

### ನಿಯಮ 39: ಪಿಂಚಣಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-12 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನ ಚೀಟಿ / ಸ್ಮಾರ್ಟ್ ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಣಿಯಾಗಿ ಕನಿಷ್ಠ 3 ವರ್ಷ ಸದಸ್ಯತ್ವವನ್ನು ಪೂರ್ಣಗೊಳಿಸಿದ ನಂತರ 60 ವರ್ಷ ವಯಸ್ಸಾಗಿರಬೇಕು.
- 60 ವರ್ಷ ಪೂರ್ಣಗೊಳ್ಳುವ 3 ತಿಂಗಳ ಮುಂಚೆ ಅಥವಾ 60 ವರ್ಷ ಪೂರ್ಣಗೊಂಡ 6 ತಿಂಗಳೊಳಗಾಗಿ ಅರ್ಜಿ ಸಲ್ಲಿಸಬೇಕು.
- ಸರ್ಕಾರದ ವಿವಿಧ ಯೋಜನೆಯಡಿಯಲ್ಲಿ ಈ ಸೌಲಭ್ಯ ಪಡೆದಿರಬಾರದು.

### ನಿಯಮ 40: ದುರ್ಬಲತೆ ಪಿಂಚಣಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-14 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನ ಚೀಟಿ / ಸ್ಮಾರ್ಟ್ ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಶಾಶ್ವತ ದುರ್ಬಲತೆಯಾಗಿರುವುದಕ್ಕೆ ಕಟ್ಟಡ ಕಾರ್ಮಿಕನ ಭಾವಚಿತ್ರ (ಫೋಟೋ).
- ದುರ್ಬಲತೆ ಗುರುತಿನ ಚೀಟಿ ಪಡೆದ ನಂತರ 6 ತಿಂಗಳೊಳಗಾಗಿ ಅರ್ಜಿ ಸಲ್ಲಿಸಬೇಕು.
- ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಪಘಾತ ಉಂಟಾಗಿ ಅದರಿಂದ ದುರ್ಬಲತೆಯಾಗಿರಬೇಕು.
- ಫಲಾನುಭವಿಗೆ ದುರ್ಬಲತೆಯಾಗಿರುವುದಕ್ಕೆ ಹಿರಿಯ ನಾಗರಿಕರ ಹಾಗೂ ಅಂಗವಿಕಲ ಸಬಲೀಕರಣ ಇಲಾಖೆ ಇವರಿಂದ ಪಡೆದ ಅಂಗವಿಕಲ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು.

### ನಿಯಮ 41: ಶ್ರಮಸಾಮರ್ಥ್ಯ ಟೂಲ್‌ಕಿಟ್ ವಿತ್ ಟ್ರೈನಿಂಗ್ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-15 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನ ಚೀಟಿ / ಸ್ಮಾರ್ಟ್ ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಫಲಾನುಭವಿಯ ಸದಸ್ಯತ್ವ ಅವಧಿಯಲ್ಲಿ ಒಂದು ಬಾರಿ ಮಾತ್ರ ಈ ಸೌಲಭ್ಯವನ್ನು ಪಡೆದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು.

- ಫಲಾನುಭವಿಯು ತರಬೇತಿ ಪಡೆಯಲು 55 ವರ್ಷ ವಯಸ್ಸಿನ ಒಳಗಿರಬೇಕು.

**ನಿಯಮ 42: ಮನೆ ಖರೀದಿ ಅಥವಾ ನಿರ್ಮಾಣಕ್ಕಾಗಿ (ಕಾರ್ಮಿಕ ಗೃಹ ಭಾಗ್ಯ) ನೀಡುವ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:**

- ನಮೂನೆ-16 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ
- ಮಂಡಳಿಯಿಂದ ನೀಡಿರುವ ಗುರುತಿನ ಚೀಟಿ/ಸ್ಮಾರ್ಟ್ ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ
- ಅರ್ಜಿ ಸಲ್ಲಿಸುವ ಫಲಾನುಭವಿಗೆ ಕನಿಷ್ಠ 45 ವರ್ಷ ವಯಸ್ಸಾಗಿರಬೇಕು
- ಸರ್ಕಾರದಿಂದ ಯಾವುದಾದರೂ ಯೋಜನೆಯಡಿ ಮನೆ ನಿರ್ಮಾಣಕ್ಕಾಗಿ ಸಾಲ ಮಂಜೂರಾಗಿರಬೇಕು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

**ನಿಯಮ 43: ಹೆರಿಗೆ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.**

- ನಮೂನೆ-17 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನ ಚೀಟಿ / ಸ್ಮಾರ್ಟ್ ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಾಯಿತ ಮಹಿಳಾ ಫಲಾನುಭವಿಯು ತನ್ನ ಮೊದಲ 2 ಹೆರಿಗೆಗಳಿಗೆ ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾಳೆ. (ಕೇವಲ ಎರಡು ಜೀವಂತ ಮಕ್ಕಳಿದ್ದಾರೆ ಎನ್ನುವುದನ್ನು ಖಚಿತ ಪಡಿಸಿಕೊಳ್ಳಬೇಕು.)
- ಇದು ಎರಡನೇ ಹೆರಿಗೆ ಎಂದು ಅಫಿಡೆವಿಟ್ ಸಲ್ಲಿಸಬೇಕು.
- ಜನನ ಮತ್ತು ಮರಣ ಪ್ರಮಾಣ ನೊಂದಣಾಧಿಕಾರಿಗಳಿಂದ ಪಡೆದ ಜನನ ಪ್ರಮಾಣ ಪತ್ರ ಸಲ್ಲಿಸಬೇಕು.
- ಹೆರಿಗೆಯಾದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು.

**ನಿಯಮ 43-ಎ: ಪೂರ್ವ ಪ್ರಾಥಮಿಕ ಶಿಕ್ಷಣ ಹಾಗೂ ಪೌಷ್ಠಿಕಾಂಶಗಳನ್ನು ಮಹಿಳಾ ಫಲಾನುಭವಿಯು ಮೊದಲ ಎರಡು ಮಕ್ಕಳಿಗಾಗಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್. (ತಾಯಿ ಮಗು ಸಹಾಯ ಹಸ್ತ)**

- ನಮೂನೆ-17-ಎ ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನ ಚೀಟಿ / ಸ್ಮಾರ್ಟ್ ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಾಯಿತ ಮಹಿಳಾ ಫಲಾನುಭವಿಯು ತನ್ನ ಮೊದಲ ಎರಡು ಹೆರಿಗೆಗಳಿಗೆ ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾಳೆ.
- ಎರಡನೇ ಹೆರಿಗೆಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಫಿಡೆವಿಟ್ ಸಲ್ಲಿಸಬೇಕು.

- ಜನನ ಮತ್ತು ಮರಣ ಪ್ರಮಾಣ ಅಧಿಕಾರಿಗಳಿಂದ ಜನನ ಪ್ರಮಾಣ ಪತ್ರ ಸಲ್ಲಿಸಬೇಕು.
- ಹೆರಿಗೆಯಾದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು

**ನಿಯಮ 44: ಅಂತ್ಯಕ್ರಿಯೆ ಸಂಸ್ಕಾರ ಮತ್ತು ಅನುಗ್ರಹರಾಶಿ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.**

- ನಮೂನೆ-18 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನ ಚೀಟಿ / ಸ್ಮಾರ್ಟ್ ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಮೃತ ಫಲಾನುಭವಿಯ ಮೂಲ / ದೃಢೀಕೃತ ಮರಣ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
- ಮೃತ ಫಲಾನುಭವಿಯ ವಯಸ್ಸು 60 ವರ್ಷ ಮೀರದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.
- ಅರ್ಜಿದಾರನನ್ನು ಮೃತ ಫಲಾನುಭವಿಯ ನಾಮನಿರ್ದೇಶಿತನಾಗಿ ನೋಂದಾಯಿಸಲಾಗಿದೆಯೇ ಎಂದು ಖಚಿತ ಪಡಿಸಿಕೊಳ್ಳಬೇಕು.
- ಫಲಾನುಭವಿಯು ಮೃತನಾದ ಒಂದು ವರ್ಷದೊಳಗೆ ಅರ್ಜಿಯನ್ನು ಸಲ್ಲಿಸಬೇಕು.

**ನಿಯಮ 45: ಶೈಕ್ಷಣಿಕ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.**

- ನಮೂನೆ-19 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನ ಚೀಟಿ / ಸ್ಮಾರ್ಟ್ ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ
- ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಫಲಾಭವಿಯ ಮಗ / ಮಗಳು ಉತ್ತೀರ್ಣ ಆಗಿರುವ ಕುರಿತು ಅಂಕಪಟ್ಟಿ ಹಾಗೂ ವ್ಯಾಸಂಗ ಮಾಡುತ್ತಿರುವ
- ಸಂಸ್ಥೆಯ ಮುಖ್ಯಸ್ಥರಿಂದ ವ್ಯಾಸಂಗ ಮೂಲ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಫಲಾನುಭವಿಯ ಪ್ರಸ್ತುತ ಅರ್ಜಿಯು ಈ ಹಿಂದೆ ಶೈಕ್ಷಣಿಕ ಸಹಾಯಧನ ಪಡೆದ ಇಬ್ಬರು ಮಕ್ಕಳಿಗೆ ಅನ್ವಯಿಸಲಾಗಿದೆಯೇ ಎಂದು ಖಾತ್ರಿ ಪಡಿಸಿಕೊಳ್ಳಬೇಕು.
- ಶೈಕಣಿಕ ಸಹಾಯಧನ ಅರ್ಜಿಯನ್ನು ಶೈಕ್ಷಣಿಕ ವರ್ಷ ಪ್ರಾರಂಭವಾದ ದಿನದಿಂದ 6 ತಿಂಗಳ ಒಳಗೆ ಸಲ್ಲಿಸಬೇಕು.

**ನಿಯಮ 46: ಒಳರೋಗಿ ವೈದ್ಯಕೀಯ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.**

- ನಮೂನೆ-20 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನ ಚೀಟಿ / ಸ್ಮಾರ್ಟ್ ಕಾರ್ಡ್ ಸಲ್ಲಿಸುವುದು.

- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಫಲಾನುಭವಿಯು ಆಸ್ಪತ್ರೆಯಲ್ಲಿ ದಾಖಲಾದ ದಿನಾಂಕ ಹಾಗೂ ಬಿಡುಗಡೆಯಾದ ದಿನಾಂಕ ವಿವರಗಳನ್ನು ನಮೂದಿಸಬೇಕು.
- ಫಲಾನುಭವಿಯು ಸರ್ಕಾರಿ / ಸರ್ಕಾರದಿಂದ ಮಾನ್ಯತೆ ಪಡೆದ (ಶೆಡ್ಯೂಲ್ 1ಗೆ ಸೇರಿದ) ಖಾಸಗಿ ಆಸ್ಪತ್ರೆಗಳಲ್ಲಿ ಕನಿಷ್ಠ ಎರಡು ದಿನ ಒಳರೋಗಿಯಾಗಿ ದಾಖಲಾಗಿರುವ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಆಸ್ಪತ್ರೆಗೆ ದಾಖಲಾದ ದಿನಾಂಕದಿಂದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು

**ನಿಯಮ 47: ಅಪಘಾತ ಮರಣ, ಶಾಶ್ವತ ಸಂಪೂರ್ಣ / ಭಾಗಶಃ ದುರ್ಬಲತೆ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.**

- ನಮೂನೆ-21 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನ ಚೀಟಿ / ಸ್ಮಾರ್ಟ್ ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ದೃಢೀಕೃತ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಅಪಘಾತದ ಸ್ವರೂಪವನ್ನು ನಮೂದಿಸಬೇಕು.
- ದುರ್ಬಲತೆ ಪ್ರಕರಣವಿದ್ದಲ್ಲಿ, ಅಪಘಾತದ ಪರಿಣಾಮವಾಗಿರುವ ಶಾಶ್ವತ-ಸಂಪೂರ್ಣ (ಪ್ರತಿ ಶತಃ 100ರಷ್ಟು) ಅಥವಾ ಶಾಶ್ವತ-ಭಾಗಶಃ (ಪ್ರತಿ ಶತಃ 100ಕ್ಕಿಂತ ಕಡಿಮೆ) ದುರ್ಬಲತೆಯಾದ ಬಗ್ಗೆ ಹಾಗೂ ದುರ್ಬಲತೆಯ ಶೇಕಡವಾರು ಪ್ರಮಾಣ ನಮೂದಿಸಬೇಕು.
- ಫಲಾನುಭವಿಗೆ ದುರ್ಬಲತೆಯಾದ ನಂತರ ತಪಾಸಣೆ ಮಾಡಿದ ಸರ್ಕಾರಿ / ಸರ್ಕಾರದ ಮಾನ್ಯತೆ ಪಡೆದ ಖಾಸಗಿ ಆಸ್ಪತ್ರೆ ವೈದ್ಯರಿಂದ ಶೇಕಡವಾರು ದುರ್ಬಲತೆ ಖಚಿತ ಪಡಿಸಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಲಗತ್ತಿಸುವುದು.
- ನಮೂನೆ 21ಎ ನಲ್ಲಿ ನಿಯೋಜಕರಿಂದ ಪಡೆದ ವರದಿಯನ್ನು ಸಲ್ಲಿಸಬೇಕು.
- ಅಪಘಾತ ಸಂಭವಿಸಿದ ಒಂದು ವರ್ಷದೊಳಗೆ ಅರ್ಜಿಯನ್ನು ಸಲ್ಲಿಸಬೇಕು.

**ನಿಯಮ 48: ಪ್ರಮುಖ ವೈದ್ಯಕೀಯ ವೆಚ್ಚ (ಕಾರ್ಮಿಕ ಚಿಕಿತ್ಸಾ ವೆಚ್ಚ) ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:**

- ನಮೂನೆ-22 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ
- ನಮೂನೆ-22 (ಎ) ರಲ್ಲಿ ಚಿಕಿತ್ಸೆ ನೀಡಿದ ವೈದ್ಯರಿಂದ ಮಾಹಿತಿಯನ್ನು ಭರ್ತಿ ಮಾಡಿ ಸಲ್ಲಿಸುವುದು
- ಮಂಡಳಿಯಿಂದ ನೀಡಿರುವ ಗುರುತಿನ ಚೀಟಿ/ಸ್ಮಾರ್ಟ್ ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ

- ಸರ್ಕಾರಿ/ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಆಸ್ಪತ್ರೆ/ಆರ್.ಎಸ್.ಬಿ.ವೈ. ಯೋಜನೆಯಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರಬೇಕು.
- ಆಸ್ಪತ್ರೆಯಿಂದ ಬಿಡುಗಡೆಯಾದ 6 ತಿಂಗಳೊಳಗಾಗಿ ಅರ್ಜಿ ಸಲ್ಲಿಸಬೇಕು
- ಚಿಕಿತ್ಸೆ ಪಡೆದ ಮೂಲ ವೈದ್ಯಕೀಯ ದಾಖಲೆಗಳನ್ನು ಮತ್ತು ಬಿಲ್ಲುಗಳನ್ನು ಸಲ್ಲಿಸುವುದು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

**ನಿಯಮ 49: ಮದುವೆ ಸಹಾಯಧನ (ಗೃಹಲಕ್ಷ್ಮೀ ಬಾಂಡ್) ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:**

- ನಮೂನೆ-23 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ
- ಮಂಡಳಿಯಿಂದ ನೀಡಿರುವ ಗುರುತಿನ ಚೀಟಿ/ಸ್ಮಾರ್ಟ್ ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ
- ನೋಂದಣಿಯಾಗಿ ಒಂದು ವರ್ಷ ಪೂರೈಯಿಸಿದ ನಂತರ ಫಲಾನುಭವಿ/ಮಕ್ಕಳಿಗೆ ಮದುವೆಯಾಗಿರಬೇಕು
- ಮದುವೆಯಾದ 6 ತಿಂಗಳ ಒಳಗಾಗಿ ಅರ್ಜಿ ಸಲ್ಲಿಸಬೇಕು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

**ನಿಯಮ 49(ಡಿ): ಕಾರ್ಮಿಕ ಅನಿಲ ಭಾಗ್ಯ ಸೌಲಭ್ಯ (ಎಲ್‌ಪಿಜಿ) ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್**

- ನಮೂನೆ-23 (ಎ) ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ
- ಮಂಡಳಿಯಿಂದ ನೀಡಿರುವ ಗುರುತಿನ ಚೀಟಿ/ಸ್ಮಾರ್ಟ್ ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ
- ಫಲಾನುಭವಿಯ ಕುಟುಂಬದ ಒಬ್ಬ ಸದಸ್ಯರು ಮಾತ್ರ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ.
- ಆಧಾರ್ ಕಾರ್ಡ್, ಪಡಿತರ ಚೀಟಿ ಮತ್ತು ನೋಟರಿಯಿಂದ ಪಡೆದ ಅಫಿಡವಿಟ್ ಅಥವಾ ಆಹಾರ ನಿರೀಕ್ಷಕರಿಂದ ಪಡೆದ ಪ್ರಮಾಣ ಪತ್ರವನ್ನು ಸಲ್ಲಿಸುವುದು.

**ನಿಯಮ 49(ಇ): ಬಿ.ಎಂ.ಟಿ.ಸಿ. ಬಸ್ ಪಾಸ್ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:**

- ನಮೂನೆ-23 (ಬಿ) ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ
- ಮಂಡಳಿಯಿಂದ ನೀಡಿರುವ ಗುರುತಿನ ಚೀಟಿ/ಸ್ಮಾರ್ಟ್ ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಖಾಯಂ ವಿಳಾಸ ಹೊಂದಿರುವ ಫಲಾನುಭವಿಯಾಗಿರಬೇಕು
- ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿ ಪ್ರತಿ ಸಲ್ಲಿಸುವುದು.
- ಬಿಎಂಟಿಸಿ ಸಂಸ್ಥೆ ನೀಡುವ ಬಸ್ ಪಾಸ್ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸುವುದು.

**ನಿಯಮ 49(ಎಫ್): ಕೆ.ಎಸ್.ಆರ್.ಟಿ.ಸಿ. ಬಸ್‌ಪಾಸ್ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:**

- ನಮೂನೆ-23 (ಸಿ) ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ
- ಮಂಡಳಿಯಿಂದ ನೀಡಿರುವ ಗುರುತಿನ ಚೀಟಿ/ಸ್ಮಾರ್ಟ್ ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ
- ಫಲಾನುಭವಿಯ ಇಬ್ಬರು ಮಕ್ಕಳಿಗೆ ಮಾತ್ರ ಖಾಯಂ ವಿಳಾಸದಿಂದ ವಿದ್ಯಾ ಸಂಸ್ಥೆಯವರಿಗೆ ಕೆ.ಎಸ್.ಆರ್.ಟಿ.ಸಿ. ಬಸ್‌ಪಾಸ್ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ.
- ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿ ಪ್ರತಿ ಸಲ್ಲಿಸುವುದು.
- ಕೆ.ಎಸ್.ಆರ್.ಟಿ.ಸಿ. ಸಂಸ್ಥೆ ನೀಡುವ ಬಸ್ ಪಾಸ್ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸುವುದು

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಳೆದೆರಡು ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಪ್ರಯೋಜನ ಪಡೆದಿರುವ ಕಾರ್ಮಿಕರ ಸಂಖ್ಯೆಯ ವಿವರ:

## ಅನುಬಂಧ-4ಎ

## ಹಾಸನ ಜಿಲ್ಲೆಯಲ್ಲಿ ಕಟ್ಟಡ ಕಾರ್ಮಿಕರಿಗೆ ಮಂಜೂರು ಮಾಡಿದ ಧನ ಸಹಾಯದ ವಿವರ

## 2018–19

| Sl.No | Taluk | ಶೈಕ್ಷಣಿಕ ಧನ ಸಹಾಯ | | ಮದುವೆ ಧನ ಸಹಾಯ | | ವೈದ್ಯಕೀಯ ಧನಸಹಾಯ | | ಹೆರಿಗೆ ಧನಸಹಾಯ | | ಅಂತ್ಯ ಸಂಸ್ಕಾರ | | ಅಪಘಾರ ಮರಣ | | ಶಾಶ್ವತ ದುರ್ಬಲತೆ | |
|---|---|---|---|---|---|---|---|---|---|---|---|---|---|---|---|
| | | ಕ್ಲೈಂ ಸಂಖ್ಯೆ | ಮೊತ್ತ | ಕ್ಲೈಂ ಸಂಖ್ಯೆ | ಮೊತ್ತ | ಕ್ಲೈಂ ಸಂಖ್ಯೆ | ಮೊತ್ತ | ಕ್ಲೈಂ ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಆಲೂರು | 326 | 3092770 | 73 | 3650000 | 9 | 445734 | 5 | 75000 | 0 | 0 | 0 | 0 | 0 | 0 |
| 2 | ಹಾಸನ | 2569 | 19052080 | 201 | 10050000 | 60 | 2183791 | 1 | 30000 | 41 | 22014000 | 3 | 1300000 | 0 | 0 |
| 3 | ಬೇಲೂರು | 324 | 2412090 | 30 | 1500000 | 4 | 91000 | 1 | 15000 | 3 | 162000 | 0 | 0 | 0 | 0 |
| 4 | ಸಕಲೇಶಪುರ | 96 | 761590 | 12 | 600000 | 0 | 0 | 0 | 0 | 6 | 324000 | 0 | 0 | 0 | 0 |
| 6 | ಅರಕಲಗೂಡು | 361 | 2673000 | 28 | 1400000 | 2 | 2400 | 0 | 0 | 7 | 378000 | 1 | 50000 | 0 | 0 |
| 7 | ಅರಸೀಕೆರೆ | 377 | 2199000 | 40 | 2000000 | 4 | 157700 | 1 | 15000 | 7 | 3780000 | 0 | 0 | 0 | 0 |
| 8 | ಚನ್ನರಾಪಟ್ಟಣ | 765 | 6073660 | 75 | 3750000 | 5 | 193300 | 2 | 35000 | 12 | 6480000 | 0 | 0 | 0 | 0 |
| 9 | ಹೊಳೆನರಸೀಪುರ | 542 | 3661840 | 42 | 2100000 | 1 | 17250 | 0 | 0 | 11 | 594000 | 0 | 0 | 0 | 0 |
| | ಒಟ್ಟು | **5360** | **39926030** | **501** | **25050000** | **85** | **3091175** | **10** | **170000** | **87** | **4698000** | **4** | **1800000** | - | - |

# 2019-20.

| ಕ್ರ. ಸಂ. | ತಾಲ್ಲೂಕು/ಕಛೇರಿ | ಶೈಕ್ಷಣಿಕ ಧನ ಸಹಾಯ | | ಮದುವೆ ಧನ ಸಹಾಯ | | ವೈದ್ಯಕೀಯ ಧನಸಹಾಯ | | ಹೆರಿಗೆ ಧನಸಹಾಯ | | ಅಂತ್ಯ ಸಂಸ್ಕಾರ | | ಅಪಘಾತ ಮರಣ | | ಶಾಶ್ವತ ದುರ್ಬಲತೆ | |
|---|---|---|---|---|---|---|---|---|---|---|---|---|---|---|---|
| | | ಕ್ಲೈಂ ಸಂಖ್ಯೆ | ಮೊತ್ತ | ಕ್ಲೈಂ ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಆಲೂರು | 1075 | 9167590 | 64 | 3200000 | 04 | 154633 | 0 | 0 | 0 | 0 | 0 | 0 | 0 | 0 |
| 2 | ಬೇಲೂರು | 368 | 3232000 | 36 | 1800000 | 01 | 40000 | 0 | 0 | 04 | 216000 | 0 | 0 | 0 | 0 |
| 3 | ಸಕಲೇಶಪುರ | 181 | 1636590 | 23 | 1150000 | 0 | 0 | 0 | 0 | 0 | 0 | 0 | 0 | 0 | 0 |
| 4 | ಹಾಸನ | 3155 | 26529170 | 206 | 10300000 | 61 | 3289242 | 0 | 0 | 41 | 2214000 | 0 | 0 | 01 | 150000 |
| 5 | ಅರಕಲಗೂಡು | 387 | 3189000 | 41 | 2050000 | 01 | 21500 | 0 | 0 | 08 | 432000 | 01 | 300000 | 0 | 0 |
| 6 | ಅರಸೀಕೆರೆ | 568 | 4231000 | 58 | 2900000 | 01 | 70000 | 0 | 0 | 08 | 432000 | 0 | 0 | 0 | 0 |
| 7 | ಚನ್ನರಾಯಪಟ್ಟಣ | 1036 | 8818500 | 129 | 6450000 | 05 | 483500 | 2 | 50000 | 09 | 486000 | 01 | 200000 | 0 | 0 |
| 8 | ಹೊಳೆನರಸೀಪುರ | 468 | 3908000 | 52 | 2600000 | 0 | 0 | 0 | 0 | 06 | 324000 | 01 | 500000 | 0 | 0 |
| | **ಒಟ್ಟು** | **7238** | **60711850** | **609** | **30450000** | **73** | **058875** | **2** | **50000** | **76** | **4104000** | **03** | **1000000** | **01** | **150000** |

ಅನುಬಂಧ-5

## ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ವಂತಿಗೆ ಪಾವತಿ ಮಾಡುವ ವಿವಿಧ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರಿಗೆ ಈ ಕೆಳಕಂಡ ಯೋಜನೆಗಳು ಜಾರಿಯಲ್ಲಿರುತ್ತವೆ.

1. ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ
2. ವೈದ್ಯಕೀಯ ನೆರವು.
3. ಅಪಘಾತ ಧನ ಸಹಾಯ.
4. ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ.
5. ವಾರ್ಷಿಕ ವೈದ್ಯಕೀಯ ತಪಾಸಣೆ ಶಿಭಿರಕ್ಕೆ ಧನ ಸಹಾಯ.
6. ವಾರ್ಷಿಕ ಕ್ರೀಡಾಕೂಟ ಹಮ್ಮಿಕೊಳ್ಳುವ ಕಾರ್ಮಿಕ ಸಂಘಟನೆಗೆ ಧನ ಸಹಾಯ

ಹಾಸನ ಜಿಲ್ಲೆಯಲ್ಲಿ 2018-19ನೇ ಸಾಲಿನಲ್ಲಿ ಒಟ್ಟು 524 ಫಲಾನುಭವಿಗಳಿಗೆ ರೂ.19,98,000/- ಹಾಗೂ 2019-20ನೇ ಸಾಲಿನಲ್ಲಿ ಒಟ್ಟು 1215 ಫಲಾನುಭವಿಗಳಿಗೆ ರೂ.47,09,000/- ಕಲ್ಯಾಣ ಯೋಜನೆಯಡಿ ಸೌಲಭ್ಯಗಳನ್ನು ಪಡೆದಿರುತ್ತಾರೆ.

# ಅನುಬಂಧ-ಶು

## ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ

| ಕ್ರ.ಸಂ | ಫಲಾನುಭವಿ ಆಧಾರಿತ ಯೋಜನೆ/ಕಾರ್ಯಕ್ರಮ | ರಾಜ್ಯವಲಯ ಅಥವಾ ಕೇಂದ್ರ ಪುರಸ್ಕೃತ ಯೋಜನೆ | ಅನುಷ್ಠಾನಗೊಳಿಸಲು ಅನುಸರಿಸುತ್ತಿರುವ ಮಾನದಂಡ |
|---|---|---|---|
| 1 | ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ | ರಾಜ್ಯವಲಯ | ಕಾರ್ಮಿಕ ಕಲ್ಯಾಣ ಮಂಡಳಿಗೆ ವಂತಿಗೆ ಪಾವತಿ ಮಾಡುವ ವಿವಿಧ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಘಟಿತ ಕಾರ್ಮಿಕರ ಮಕ್ಕಳಾಗಿದ್ದು, ಹಿಂದಿನ ತರಗತಿಯಲ್ಲಿ ಶೇಕಡಾ.50% ರಷ್ಟು ಅಂಕ ಪಡೆದು ಎಲ್ಲಾ ವಿಷಯಗಳಲ್ಲೂ ತೇರ್ಗಡೆ ಹೊಂದಿರಬೇಕು. |
| 2 | ವೈದ್ಯಕೀಯ ನೆರವು. | “ | ಕಾರ್ಮಿಕ ಕಲ್ಯಾಣ ಮಂಡಳಿಗೆ ವಂತಿಗೆ ಪಾವತಿ ಮಾಡುವ ವಿವಿಧ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಘಟಿತ ಕಾರ್ಮಿಕರಾಗಿರಬೇಕು. |
| 3 | ಅಪಘಾತ ಧನ ಸಹಾಯ. | “ | “ |
| 4 | ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ. | “ | “ |
| 5 | ವಾರ್ಷಿಕ ವೈದ್ಯಕೀಯ ತಪಾಸಣೆ ಶಿಭಿರಕ್ಕೆ ಧನ ಸಹಾಯ. | “ | ನೊಂದಾಯಿತ ಕಾರ್ಮಿಕ ಸಂಘಟನೆಯಾಗಿದ್ದು ಸಂಘಟಿತ ಕಾರ್ಮಿಕರಿಗೆ ಹಮ್ಮಿಕೊಳ್ಳುವ ವಾರ್ಷಿಕ ವೈದ್ಯಕೀಯ ತಪಾಸಣೆ ಶಿಭಿರಕ್ಕೆ ಧನ ಸಹಾಯ ನೀಡಲಾಗುವುದು. |
| 6 | ವಾರ್ಷಿಕ ಕ್ರೀಡಾಕೂಟ ಹಮ್ಮಿಕೊಳ್ಳುವ ಕಾರ್ಮಿಕ ಸಂಘಟನೆಗೆ ಧನ ಸಹಾಯ. | “ | ನೊಂದಾಯಿತ ಕಾರ್ಮಿಕ ಸಂಘಟನೆಯಾಗಿದ್ದು ಸಂಘಟಿತ ಕಾರ್ಮಿಕರಿಗೆ ಹಮ್ಮಿಕೊಳ್ಳುವ ವಾರ್ಷಿಕ ಕ್ರೀಡಾಕೂಟ ಹಮ್ಮಿಕೊಳ್ಳುವ ಕಾರ್ಮಿಕ ಸಂಘಟನೆಗೆ ಧನ ಸಹಾಯ ನೀಡಲಾಗುವುದು. |